ಶ್ರೀ ಕೆ.ಹೆಚ್. ಹನುಮೇಗೌಡ : ಈಗ ಅವರು ಎಂಟು ಚಾಸಿಗಳನ್ನು ಕೊಟ್ಟಿದ್ದೇವೆ ಎಂದು ಹೇಳಿದರು. ಅದನ್ನು ಎಂಟು ದಿವಸಗಳಲ್ಲೇ ಮಾಡಿ ಬಿಸಾಕುತ್ತಾರೆ. ಆಮೇಲೆ ಏನು ಮಾಡಬೇಕು? ಅವರು ಪ್ರೈವೇಟ್‌ನವರಿಗೆ 60-70 ಚಾಸಿಗಳನ್ನು ಕಟ್ಟುವುದಕ್ಕೆ ಕೊಡುವುದರ ಬದಲು ಸರ್ಕಾರದ ಫ್ಯಾಕ್ಟರಿಗೇ ಏಕೆ ಕೊಡಬಾರದು? ಎರಡನೇಯದು, ಅಲ್ಲಿರತಕ್ಕಂಥ ಎಂ.ಡಿ. ಯಾರಿದ್ದಾರೆ? ಅವರ ಮೇಲೆ ಕಾರ್ಮಿಕರು ಬಹಳ ಕಂಪ್ಲೇಂಟ್ ಹೇಳುತ್ತಾರೆ. ಅವರೇ ಇಷ್ಟೆಲ್ಲ ಅನಾಹುತಗಳಿಗೆ ಕಾರಣರು ಎಂದು ಅವರು ಹೇಳುತ್ತಾರೆ. ಆ ಕಾರ್ಮಿಕರ ಬಗ್ಗೆ ಸಹಾನುಭೂತಿ ಇಟ್ಟುಕೊಂಡು, ದೇಶದ ಹಿತದೃಷ್ಟಿಯಿಂದ ಸ್ವಲ್ಪ ಉತ್ತಮವಾಗಿ ಕೆಲಸ ಮಾಡುವ ಅಧಿಕಾರಿಗಳನ್ನು ಹುಡುಕಿ ಹಾಕುವುದಕ್ಕೆ ಆಗುವುದಿಲ್ಲವೇ?

ಅಧ್ಯಕ್ಷರು : ಹುಡುಕುತ್ತಾರೆ ಬಿಡಿ.

ಶ್ರೀ ಕೆ.ಎಚ್. ಹನುಮೇಗೌಡ : ಒಂದು ವರ್ಷದಿಂದ ಹೀಗೆಯೇ ಆಗಿ ಬಹಳ ತೊಂದರೆಯಾಗುತ್ತಿದೆ. ಆಗ ಅವರು ಹೇಳಬೇಕು. ಇನ್ನು ಎಷ್ಟು ದಿವಸಗಳ ಒಳಗಾಗಿ, ಈಗ ಒಂದು ಮಾತನ್ನು ಹೇಳಿದರು, ಇಂಡಸ್ಟ್ರಿ ಡಿಪಾರ್ಟ್‌ಮೆಂಟ್, ಕೆ.ಎಸ್.ಆರ್.ಟಿ.ಸಿ.ಯವರು ಮತ್ತು ಲೇಬರ್-ಮೂರು ಜನ ಸೇರಿಕೊಂಡು ಇದನ್ನು ಸೆಟಲ್ ಮಾಡುತ್ತೇವೆ ಎಂದು. ಇದರಲ್ಲಿ ಫೈನಾನ್ಸ್‌ನ್ನೂ ದಯವಿಟ್ಟು ಸೇರಿಸಿಕೊಳ್ಳಿ. ಇನ್ನೆಷ್ಟು ದಿವಸಗಳಲ್ಲಿ ಮಾಡುತ್ತೀರಿ ಎಂದು ದಯವಿಟ್ಟು ಹೇಳಬೇಕು. ನೀವು ಹೇಳಿದಮೇಲೆ ಅದರಂತೆ ನಡೆದುಕೊಳ್ಳದೇ ಹೋದರೆ ಆ ಕಾರ್ಮಿಕರನ್ನು ನಾನು ತಮ್ಮ ಮನೆ ಹತ್ತಿರಕ್ಕೆ ಕಳಿಸುತ್ತೇನೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಹನುಮೇಗೌಡರೇ, ಸರ್ಕಾರ ಎಂತಹ ಅಧಿಕಾರಿಗಳನ್ನು ಹುಡುಕುತ್ತಾರೆ ಎಂಬುದು ನಿಮಗೆ ಗೊತ್ತಿಲ್ಲವೇನು?

ಶ್ರೀ ಎ.ಎಸ್. ನಾಡಗೌಡ : ಈ ಮೀಟಿಂಗ್‌ನ್ನು 14ನೇ ತಾರೀಖಿಗೆಂದು ಫಿಕ್ಸ್‌ಮಾಡಿದ್ದೆವು. ಆದರೆ ಮುಖ್ಯಮಂತ್ರಿಗಳು ತಮಗೆ ಬಿಡುವಿಲ್ಲವೆಂದು ಹೇಳಿ ಅಧಿವೇಶನ ನಂತರ ಇಟ್ಟುಕೊಳ್ಳಿ ಎಂದು ಹೇಳಿದ್ದಾರೆ. ಖಂಡಿತವಾಗಿ ಅಧಿವೇಶನದ ನಂತರ, ಈ ರೀತಿ ಒಂದೇ ಅಲ್ಲ, ಬಹಳ ಸಂಸ್ಥೆಗಳು ಇವೆ, we have to evolve some policy on that also sir.

ನಾನು ಅದನ್ನು ಖಂಡಿತವಾಗಿಯೂ ಮಾಡುತ್ತೇವೆ.

2) ಸಾಗರದ ಅಡಿಕೆ ಸಂಸ್ಕರಣಾ ಹಾಗೂ ಮಾರಾಟ ಕೇಂದ್ರದಲ್ಲಿ 60 ಲಕ್ಷ ರೂಪಾಯಿ ಬೆಲೆಬಾಳುವ ಅಡಿಕೆ ನಾಪತ್ತೆಯಾಗಿರುವುದು.

ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಸಾಗರದ ಅಡಿಕೆ ಸಂಸ್ಕರಣಾ ಹಾಗೂ ಮಾರಾಟ ಕೇಂದ್ರದಲ್ಲಿ 60 ಲಕ್ಷ ರೂಪಾಯಿ ಬೆಲೆಬಾಳುವ ಅಡಿಕೆ ನಾಪತ್ತೆಯಾಗಿರುವ ಬಗ್ಗೆ ಮಾನ್ಯ ಸಹಕಾರ ಮಂತ್ರಿಗಳ ಗಮನ ಸೆಳೆಯುತ್ತೇನೆ.

ಶ್ರೀ ಕೆ.ಎಚ್. ಪಾಟೀಲ್ (ಸಹಕಾರ ಮಂತ್ರಿಯವರು) : ಮಾನ್ಯ ಅಧ್ಯಕ್ಷರೇ, ನನ್ನ ಹೇಳಿಕೆಯು ಈ ರೀತಿ ಇದೆ :-

ಸಾಗರ ಅಡಿಕೆ ಪರಿಷ್ಕರಣ ಮತ್ತು ಮಾರಾಟ ಸಂಘದಲ್ಲಿ 2000 ಅಡಿಕೆ ಮೂಟೆಗಳು ಕಾಣೆಯಾಗಿದ್ದು, ಆ ದಾಸ್ತಾನಿನ ಒಟ್ಟು ಮೌಲ್ಯವು ಆಡಿಟ್ ವರದಿಯ ಪ್ರಕಾರ ರೂ. 68,57,245-13 ಪೈಸೆ ಆಗಿರುತ್ತದೆ. ಈ ದಾಸ್ತಾನು ದುರುಪಯೋಗದ ಬಗ್ಗೆ ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆ ಹೂಡಲಾಗಿದೆ. ಈ ಸಂಘದಲ್ಲಿ ದಿನಾಂಕ: 31-12-1989ಕ್ಕೆ ಸಂಘದ ಸದಸ್ಯರಿಗೆ ನೀಡಲಾದ ಸಾಲದ ಒಟ್ಟು ಮೊತ್ತವು

ರೂ. 520.00 ಲಕ್ಷದಷ್ಟು ಬಾಕಿ ಇರುತ್ತದೆ ಹಾಗೂ ಈ ಬಾಕಿ ವಸೂಲಿಗಾಗಿ ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳಲಾಗಿದೆ. ಸಂಘದ ಈ ಪ್ರಕರಣದ ಬಗ್ಗೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 64ರಡಿಯಲ್ಲಿ ಶಾಸನಬದ್ಧ ವಿಚಾರಣೆಗಾಗಿ ಶಿವಮೊಗ್ಗ ಉಪನಿಬಂಧಕರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿದೆ. ವಿಚಾರಣಾಧಿಕಾರಿಗಳು ಸಂಘದ ವಿಚಾರಣೆಯನ್ನು ಮಾಡುತ್ತಿದ್ದು, ವಿಚಾರಣೆಯು ಈಗ ಕೊನೆಯ ಹಂತದಲ್ಲಿರುತ್ತದೆ. ಅವರಿಂದ ವಿಚಾರಣಾ ವರದಿಯು ಬಂದನಂತರ ದಾಸ್ತಾನು ದುರುಪಯೋಗ ಹಾಗೂ ಸಾಲ ನೀಡುವಲ್ಲಿ ಉಂಟಾಗಿರುವ ಕಾನೂನು ಬಾಹಿರತೆ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು. ಅಲ್ಲದೆ ಸರ್ಕಾರವು ದಿನಾಂಕ: 4-5-1990ರಂದು ಈ ಸಂಘದ ಆಡಳಿತ ಮಂಡಳಿಯನ್ನು ರದ್ದುಮಾಡಿ ವಿಶೇಷಾಧಿಕಾರಿಯನ್ನು ನೇಮಿಸುತ್ತದೆ. ಈ ಸಹಕಾರ ಸಂಘಕ್ಕೆ ದಿನಾಂಕ: 28-12-1991ರಂದು ಸರ್ಕಾರವು 14 ಸದಸ್ಯರನ್ನೊಳಗೊಂಡ ಒಂದು ಸಲಹಾ ಸಮಿತಿಯನ್ನು ನೇಮಿಸಿರುತ್ತದೆ. ಈ ಸಲಹಾ ಸಮಿತಿಯ ನೇಮಕದಿಂದ ಉದ್ಭವಿಸಿರುವ ಪರಿಸ್ಥಿತಿ ಬಗ್ಗೆ ಸರ್ಕಾರಕ್ಕೆ ಯಾವ ದೂರೂ ಬಂದಿರುವುದಿಲ್ಲ. ಸಿ.ಒ.ಡಿ. ತನಿಖೆಗೆ ಹಾಕಿದ್ದಾರೆ. ಇದು ಕ್ರಿಮಿನಲ್ ಕೇಸ್ No.4390 under Section 409 of IPC was registered at Sagar Police Station on 27-2-90. According to my report, even more than the audit report, something has been revealed to the Police. I have talked to the Police Officer that without fear or favour an impartial enquiry should be done and culprits should be booked. This is my instructions to him.

+ ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ನಿಜವಾಗಿಯೂ ಇವತ್ತು ಅಡಿಕೆಗೆ ಇರತಕ್ಕ ಬೆಲೆಯಲ್ಲಿ ಇದು ಒಂದು ಮಾರ್ಗದರ್ಶನ ಮಾಡತಕ್ಕ ಸಹಕಾರಿ ಸಂಸ್ಥೆಯಾಗಬೇಕು. ಅಡಿಕೆ ಸಂಸ್ಕರಣ ಮತ್ತು ಮಾರಾಟ ಸಹಕಾರ ಸಂಘ ಸುಮಾರು 1984ರಿಂದ ಎಷ್ಟರಮಟ್ಟಿಗೆ ಕೆಲಸ ಮಾಡಿದೆ ಎಂದರೆ, ಬೆಳಿಗಾರರು ಸುಮಾರು 4 ಕೋಟಿ ರೂಪಾಯಿಗಳನ್ನು ಡಿಪಾಸಿಟ್ ಆಗಿ ಆ ಸಂಘದಲ್ಲಿ ಇಟ್ಟಿದ್ದಾರೆ. ನನಗೆ ಗೊತ್ತಿಲ್ಲ, ಸಹಕಾರಿ ದಿಗ್ಗಜಗಳು ಇಲ್ಲಿ ಕುಳಿತಿದ್ದಾರೆ. ಅವರು ಹೇಳಬೇಕು, ಮಾನ್ಯಮಂತ್ರಿಗಳು ಹೇಳಬೇಕು. ಸಹಕಾರಿ ಸಂಸ್ಥೆಗಳಲ್ಲಿ ಇಷ್ಟೊಂದು ವಿಶ್ವಾಸ ಇಟ್ಟಂಥ ಮತ್ತೊಂದು ಸಹಕಾರಿ ಸಂಸ್ಥೆಯನ್ನು ನಾನು ನೋಡಲೇಇಲ್ಲ. ಈ ಸಹಕಾರಿ ಸಂಸ್ಥೆ ಇಷ್ಟು ಬೇಗ ಈ ಸ್ಥಿತಿಗೆ ಬರುವುದಕ್ಕೆ ಏನು ಕಾರಣ? ನಾವು ಮೂರು ಸಾವಿರ ಮೂಟೆ ಎಂದು ಹೇಳುತ್ತೇವೆ, ನೀವು ಎರಡು ಸಾವಿರ ಮೂಟೆ ಎಂದು ಹೇಳುತ್ತೀರಿ, ಸ್ವಲ್ಪ ವ್ಯತ್ಯಾಸವಾಗಿರಬಹುದು. ಇದು ಒಂದು ದಿವಸದಲ್ಲಿ ಆಗತಕ್ಕ ಕೆಲಸವಲ್ಲ. ಪ್ರತಿವರ್ಷ ಇದನ್ನು ಮಾಡಿಕೊಂಡು ಬಂದಿದ್ದಾರೆ. ಇದರ culminative effect ಏನೆಂದರೆ, ಪ್ರತಿ ವರ್ಷ ಬರೆದುಕೊಂಡು ಬಂದರೂ, ಅಲ್ಲಿ ಅಡಿಕೆ ಇಲ್ಲ, ದುಡ್ಡು ಕೊಟ್ಟಿದ್ದಾರೆ. ಇದು ನನ್ನ ಮಾಹಿತಿ. ಇಷ್ಟೊಂದು ಪ್ರವರ್ಧಮಾನದಲ್ಲಿದ್ದಂಥ ಸಹಕಾರಿ ಸಂಸ್ಥೆ ಏಕೆ ನಷ್ಟದಲ್ಲಿದೆ?

ಈ ನಷ್ಟವನ್ನು ನಾವು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಇದರಲ್ಲಿ ದುರುಪಯೋಗವಾಗಿದೆ. ದುರುಪಯೋಗ ಒಂದು ರೀತಿಯಲ್ಲಿ ಅಲ್ಲ. ಮಾಲು ದಾಸ್ತಾನು ಸಾಲ, ಕ್ಯಾಷ್ ಕ್ರೆಡಿಟ್ ಸಾಲ, ಬೇರೆ ರೀತಿಯಲ್ಲಿ ಬರತಕ್ಕಂಥ ಸಾಲಗಳ ವಿಮರ್ಶೆ, ಇವೆಲ್ಲವುಗಳಿಂದ ಒಂದಲ್ಲ ಒಂದು ರೀತಿಯಲ್ಲಿ ದುರುಪಯೋಗವಾಗಿದೆ. ಸಹಕಾರಿ ಸಂಸ್ಥೆಯ ಬೈಲಾಗಳನ್ನು ಮೀರಿ ಸಾಲ ಕೊಟ್ಟಿದ್ದಾರೆ. ನನಗಿರತಕ್ಕ ಒಂದು ಮಾಹಿತಿ ಪ್ರಕಾರ, ರಾಜ್ಯದ ಮಂತ್ರಿಗಳೊಬ್ಬರು ಇದರಲ್ಲಿ ಕನಿಷ್ಟಪಕ್ಷ ಅವರು ಮತ್ತು ಅವರ ಸಂಗಡಿಗರು ಸುಮಾರು 60 ಲಕ್ಷ ರೂಪಾಯಿಗಳ ಸಾಲವನ್ನು ಅವರೊಬ್ಬರೇ ಪಡೆದಿದ್ದಾರೆ. ಅವರು ಮತ್ತು ಅವರ ಕುಟುಂಬದವರು, ರಕ್ಷಣೆ ಮಾಡಬೇಕಾದವರು ನೀವು, ಮಂತ್ರಿಮಂಡಲದಲ್ಲಿರತಕ್ಕ

ಸದಸ್ಯರಿಂದಲೇ ಇದು ನಡೆದಿದ್ದರೆ, ಶಿವಮೊಗ್ಗ ಜಿಲ್ಲೆಯ ವ್ಯಾಪ್ತಿಯನ್ನು ಮೀರಿ ಸಾಲ ಕೊಟ್ಟಿದ್ದೀರಿ. ಅದು ಪಕ್ಕದ ಜಿಲ್ಲೆಯಾದ ಚಿಕ್ಕಮಗಳೂರಿನವರಿಗೂ ಕೊಟ್ಟಿರಬಹುದು, ಮತ್ತೊಂದಕ್ಕೂ ಕೊಟ್ಟಿರಬಹುದು. ಹೀಗೆ ಕೊಡತಕ್ಕ ಅವಕಾಶ ಏನಿತ್ತು? ಕ್ಯಾಶ್ ಕ್ರೆಡಿಟ್ ಸುಸ್ತಿದಾರರು ಇದ್ದಾರೆ ಮತ್ತು ಮಾಲು ದಾಸ್ತಾನು ಮಾಡಿದಂಥ ಜನ, ಇವರು ಮಾಲು ದಾಸ್ತಾನು ಮಾಡಿದ್ದರೋ ಅಥವಾ ದಾಸ್ತಾನು ಇಲ್ಲವೇ ಸಾಲ ಕೊಟ್ಟರೋ. ಅಂತೂ ಎರಡು ವಿಚಾರಣೆಗಳು ನಡೆಯುತ್ತಿವೆ. ಒಂದು ಆಗಿರತಕ್ಕಂಥ ಸುಮಾರು 2 ಸಾವಿರ ಅಥವಾ 3 ಸಾವಿರ ಮೂಟೆ ಅಡಿಕೆ ಹೋಗಿದೆ ಎನ್ನುವುದಕ್ಕೆ ಸಿ.ಓ.ಡಿ. ತನಿಖೆ ಆಗುತ್ತಿದೆ. ಮತ್ತೆ ಸಹಕಾರಿ ಸಂಸ್ಥೆಯಲ್ಲಿ ಇದು ಆಗಿರುವುದರಿಂದ 64ನೇ ನಿಯಮದ ಪ್ರಕಾರ ಆಗುತ್ತಿದೆ. ಈ ಎರಡೂ ತನಿಖೆಗಳಿಂದ ತಪ್ಪು ದಾರಿಯಲ್ಲಿ ಯಾರಿದ್ದಾರೆ ಅವರನ್ನು ಹುಡುಕುವುದಕ್ಕೆ ಸಹಾಯವಾಗಬಹುದು. ಆದರೆ, ಸಹಕಾರಿ ಸಂಸ್ಥೆಯನ್ನು ಸರಿದಾರಿಯಲ್ಲಿ ನಿಲ್ಲಿಸುವುದಕ್ಕೆ ಸಹಕಾರಿ ಆಗುವುದಿಲ್ಲ.

ಈಗ ಆ ಭಾಗದಿಂದ ಬರತಕ್ಕಂಥ ಜನಗಳ ಕಳಕಳಿ ಏನು ಎಂದರೆ, ನಾಲ್ಕು ಸಾವಿರ ಕುಟುಂಬಗಳವರು ಇದರಲ್ಲಿ ವ್ಯವಹಾರ ನಡೆಸಿದ್ದಾರೆ. ಎಲ್ಲಕ್ಕಿಂತ ಮಿಗಿಲಾಗಿ, ಒಂದು ಕ್ವಿಂಟಾಲ್, ಎರಡು ಕ್ವಿಂಟಾಲ್ ಅಡಿಕೆ ಬೆಳೆಯತಕ್ಕಂಥ ಜನ, ತಮ್ಮ ಜೀವನದ ಎಲ್ಲಾ ಸೇವಿಂಗ್ಸ್‌ನ್ನೂ ತೆಗೆದುಕೊಂಡು ಹೋಗಿ ಈ ಸಹಕಾರ ಸಂಸ್ಥೆಯಲ್ಲಿಟ್ಟಿದ್ದಾರೆ. ನಾಲ್ಕು ಕೋಟಿಗೂ ಮೇಲ್ಪಟ್ಟು ಡಿಪಾಸಿಟ್ ಇದೆ ಎಂದು ಕೇಳಿದ್ದೇನೆ. ನಾನು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ. ನೀವು ವಿಚಾರಣೆ ಮಾಡಿಸುತ್ತಿದ್ದೀರಿ. ಜೊತೆಗೆ ಹೊರಗಡೆ ಕೊಟ್ಟಿರತಕ್ಕಂಥ ಸಾಲ ಎಷ್ಟು, ಮತ್ತೊಂದು ಎಷ್ಟು, ಮಗದೊಂದು ಎಷ್ಟು, ಆ ವಿವರಕ್ಕೆ ನಾನು ಹೋಗುವುದಿಲ್ಲ. ಇದೂ ವಿಚಾರಣೆಯಾಗಬೇಕು. You are the best judge. ಸಹಕಾರ ಸಂಸ್ಥೆಗಳ ವಿಚಾರದಲ್ಲಿ ನಿಮ್ಮ ಮುಂದೆ ವಾದ ಮಾಡತಕ್ಕಂಥ ಸಮರ್ಥರು ನಾನಲ್ಲ. ಒಂದನ್ನು ತಮಗೆ ಕೇಳುತ್ತೇನೆ, ಈ ಸಹಕಾರ ಸಂಸ್ಥೆಯನ್ನು ಪುನಃ ಹಳಿಯಮೇಲೆ ತಂದು ನಿಲ್ಲಿಸುವುದಕ್ಕೆ ಹೊಸ ಚುನಾವಣೆ ಮಾಡಿ, ಹೊಸ ಆಡಳಿತ ಮಂಡಲಿ ನೇಮಿಸಿ, ಜವಾಬ್ದಾರಿ ವಹಿಸಿಕೊಟ್ಟರೆ ಇದು ಚೆನ್ನಾಗಿ ನಡೆಯಬಹುದು. ಚುನಾವಣೆಗಳಲ್ಲಿ ಪೂರ್ಣ ವಿಶ್ವಾಸ ಇರುವವರು ತಾವು. ಈ ಸಂಘಕ್ಕೆ ಚುನಾವಣೆ ಮಾಡಿ ಹೊಸ ಆಡಳಿತ ಮಂಡಳಿಗೆ ಇದನ್ನು ವಹಿಸುವ ಪ್ರಾಮಾಣಿಕ ಪ್ರಯತ್ನ ತಾವು ಮಾಡುತ್ತೀರಾ ಎಂಬ ಒಂದೇ ಪ್ರಶ್ನೆಯನ್ನು ನಾನು ಕೇಳುತ್ತಿದ್ದೇನೆ.

ಶ್ರೀ ಆರ್.ಎಲ್. ಜಾಲಪ್ಪ (ದೊಡ್ಡಬಳ್ಳಾಪುರ) : ಮಾನ್ಯ ಅಧ್ಯಕ್ಷರೇ, ಈ ಸಹಕಾರ ಸಂಘದ ವಿಷಯದಲ್ಲಿ ಮಾನ್ಯ ಚಂದ್ರೇಗೌಡರು ಸಾಕಷ್ಟು ಬೆಳಕು ಚೆಲ್ಲಿದ್ದಾರೆ. ಇದೊಂದು ಮಾದರಿಯಾದ ಸಂಸ್ಥೆ. ನಾನೂ ಕೂಡ ಮಂತ್ರಿಯಾಗಿದ್ದಾಗ ಈ ಸೊಸೈಟಿಗೆ ಭೇಟಿ ಮಾಡಿ, ಅವರಿಗೆ ಅವತ್ತೇ ಒಂದು ಸಲಹೆಕೊಟ್ಟಿದ್ದೆ. ನಾನ್ ಅಫಿಶಿಯಲ್ ಸೆಕ್ರೆಟರಿಯನ್ನು ಬಹಳ ದಿವಸ ಇಟ್ಟುಕೊಳ್ಳುವುದು ಬೇಡ. ರಿಪ್ಲೇಸ್ ಮಾಡಿ, ಗೌರ್ನ್‌ಮೆಂಟ್ ಸೆಕ್ರೆಟರಿ ಹಾಕುತ್ತೇನೆ ಎಂದು ಹೇಳಿದ್ದೆ. ಆಗ ಬೋರ್ಡ್‌ನವರು ಬಂದು ನನ್ನನ್ನು ನೋಡಿ ಇದರಲ್ಲಿ ಸರಕಾರದ ಶೇರ್ ಏನೂ ಇಲ್ಲ, ಸಹಕಾರ ಸಂಘ ಚೆನ್ನಾಗಿ ಕೆಲಸ ಮಾಡುತ್ತಿದೆ, ಅನಾವಶ್ಯಕವಾಗಿ ತೊಂದರೆ ಕೊಡುವುದಕ್ಕೆ ಹೋಗಬೇಡಿ ಎಂದು ಹೇಳಿದ್ದರು. ನಾನೂ ಕೈಬಿಟ್ಟೆ. ಬಹಳ ತಪ್ಪು ಮಾಡಿದೆ ಎಂದು ಈಗ ಅನ್ನಿಸುತ್ತಿದೆ. ಮಾನ್ಯ ಮುಖ್ಯಮಂತ್ರಿಗಳು ಬಹಳ ಮುಖ್ಯವಾಗಿ ನೋಡಬೇಕಾದುದು ಏನೆಂದರೆ, ಇದರ ಬಗ್ಗೆ ಸೆಕ್ಷನ್ 64ರ ಪ್ರಕಾರ ಎನ್‌ಕ್ವೈರಿಗೆ ಆರ್ಡರ್ ಮಾಡಿರುತ್ತೀರಿ, ಸಿ.ಓ.ಡಿ. ಎನ್‌ಕ್ವೈರಿಯನ್ನೂ ಸಹ ಮಾಡಿಸುತ್ತಿದ್ದೀರಿ. ಆದರೆ ಹತ್ತು ತಿಂಗಳಾಯಿತು, ಇನ್ನೂ ಏನೂ ಕಾರ್ಯಗತ ಆಗಲಿಲ್ಲ. ಜೊತೆಗೆ ಈ ಆಡಳಿತ ಮಂಡಳಿಗೆ ಅಡ್ವೈಸರಿ ಕಮಿಟಿಯನ್ನು ಹಾಕಿದಮೇಲೆ ನಮಗೆ ಅನುಮಾನ

ಬಂದಿದೆ. ಆ ಭಾಗದ ಜನಕ್ಕೂ ಅನುಮಾನ ಬಂದಿದೆ. ಇದನ್ನು ಸಪ್ರೆಸ್ ಮಾಡುವುದಕ್ಕೆ ಅಡ್ವೈಸರಿ ಕಮಿಟಿ ಹಾಕಿದ್ದಾರೆ ಎಂಬ ಅನುಮಾನ ಬಂದಿದೆ. ಆಡಿಟರ್‌ರವರ ರಿಪೋರ್ಟ್ ತರಿಸಿ ನೋಡಿ. ಆಡಿಟರ್‌ರವರು ಇವರ ಜೊತೆಯೊಳಗೆ ಶಾಮೀಲಾಗಿದ್ದಾರೆ. ನಾನು ಕೆಲವು ಉದಾಹರಣೆಗಳನ್ನು ತಮ್ಮ ಗಮನಕ್ಕೆ ತರುತ್ತೇನೆ. ಇವನು ಆಡಿಟ್ ಮಾಡುವ ಹೊತ್ತಿಗೇ ತಾವು ಸೆಕ್ಷನ್ 64ರ ಪ್ರಕಾರ ಎನ್‌ಕ್ವೈರಿಗೆ ಆರ್ಡರ್ ಮಾಡಿರುತ್ತೀರಿ. ಪ್ರಾಂಪ್ಟ್ ಆಕ್ಷನ್ ತೆಗೆದುಕೊಂಡಿರುತ್ತೀರಿ. I am not blaming the Govt. ಆಮೇಲೆ ಸಿ.ಒ.ಡಿ. ಎನ್‌ಕ್ವೈರಿಗೆ ರೆಫರ್ ಮಾಡಿರುತ್ತೀರಿ. ಇಷ್ಟಾದಮೇಲೂ ಕೂಡ ಇವರು 441 ಆಡಿಟರ್ ಅಲ್ಲಿ ಎಲ್ಲವನ್ನೂ ಮುಚ್ಚಿಡುವುದಕ್ಕೆ ಪ್ರಯತ್ನಪಟ್ಟಿದ್ದಾನೆ. ಯಾರೋ ಇಬ್ಬರು ಸ್ಟೋರ್ಸ್‌ಕೀಪರ್ಸ್, ಗೋಡೌನ್ ಕ್ಲರ್ಕ್ಸ್, ಇಬ್ಬರ ತಲೆಮೇಲೆ ಹೊರಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾನೆ. ಆದರೆ ಆಡಿಟ್ ರಿಪೋರ್ಟ್‌ನಲ್ಲಿ ಸೆಕ್ರೆಟರಿಗಳನ್ನು ತರಲಿಲ್ಲ, ಅವರ ಮೇಲೆ ಜವಾಬ್ದಾರಿ ಇಲ್ಲ, ಆಡಳಿತ ಮಂಡಳಿಯವರ ಮೇಲೆ ಜವಾಬ್ದಾರಿ ಇಲ್ಲ. ನಮಗೆ ವರ್ತಮಾನ ಬಂದಿರುವ ಪ್ರಕಾರ, ಈ ಆಡಳಿತಮಂಡಳಿಯವರು ತಮ್ಮ ಆಸ್ತಿಗಳನ್ನು ಬೇರೆಯವರಿಗೆ ಈಗಾಗಲೇ ಟ್ರಾನ್ಸ್‌ಫರ್ ಮಾಡಿದ್ದಾರಂತೆ. ಮೊದಲನೆಯದಾಗಿ, ತಾವು ಪ್ರಾಪರ್ಟಿ ಅಟ್ಯಾಚ್‌ಮೆಂಟ್ ಮಾಡಿಸಬೇಕಾಗಿತ್ತು. ನಿಮ್ಮ ಅಧಿಕಾರಿಗಳು ಏನು ಮಾಡುತ್ತಿದ್ದರೋ ಗೊತ್ತಾಗಲಿಲ್ಲ. ಸರಕಾರದ ಗಮನಕ್ಕೆ ಬಂದ ತಕ್ಷಣ ಮೊದಲು ಮಾಡಬೇಕಾದುದು ಎಂದರೆ attachment before judgement which should have done.

ಈಗ ನನಗೆ ಗೊತ್ತಿದ್ದ ಪ್ರಕಾರ ಸೆಕ್ರೆಟರಿ ತನ್ನ ಆಸ್ತಿಯನ್ನು ಬೇರೆಯವರ ಹೆಸರಿಗೆ ಮಾಡಿರುತ್ತಾನೆ. ಕೆಲವು ರೆಸ್ಪಾನ್ಸಿಬಲ್ ಡೈರೆಕ್ಟರ್ಸ್ ಕೂಡಾ ಮಾಡಿರುತ್ತಾರೆ. ಅಧ್ಯಕ್ಷರೂ ಕೂಡಾ ಮಾಡಿರುತ್ತಾರೆ. ನನ್ನ ನೋಟೀಸ್‌ಗೆ ಬಂದಿರತಕ್ಕಂಥಾದ್ದು ಇದು. ಆಮೇಲೆ ತಮ್ಮ ಅಧಿಕಾರಿಗಳು ಸರಿಯಾಗಿ ಸಲಹೆ ಕೊಟ್ಟರೋ ಇಲ್ಲವೋ ಗೊತ್ತಿಲ್ಲ. ನನ್ನ ಕಾಲದಲ್ಲಿ ಒಂದು ಅಮೆಂಡ್‌ಮೆಂಟ್ ತಂದಿದ್ದೆ. ನನಗೆ ಜ್ಞಾಪಕ ಇದೆ. ಯಾವ ಸೊಸೈಟಿಯನ್ನು ನಾವು ಸೂಪರ್‌ಸೀಡ್ ಮಾಡುತ್ತೇವೆ, ಆ ಸೊಸೈಟಿಗೆ ನಾಲ್ಕು ತಿಂಗಳ ಒಳಗಾಗಿ ಎಲೆಕ್ಷನ್ ನಡೆಯಬೇಕು ಮತ್ತು ಆ ಎಲೆಕ್ಷನ್‌ನಲ್ಲಿ ಸೂಪರ್‌ಸೀಡ್ ಆಗತಕ್ಕೆ ಕಾಲದಲ್ಲಿ ಯಾರೂ ಡೈರೆಕ್ಟರ್ಸ್ ಆಡಳಿತ ಮುಡಳಿಯವರು ಇರುತ್ತಾರೆ. ಅವರು ಮೂರು ವರ್ಷಗಳ ಕಾಲ ಎಲೆಕ್ಷನ್‌ಗೆ ಕಂಟೆಸ್ಟ್ ಮಾಡಬಾರದು ಎಂದು ಕಾನೂನು ಮಾಡಿರುತ್ತೇವೆ. ತಾವು ಅಡ್ವೈಸರಿ ಕಮಿಟಿಗೆ ನಾಮಿನೇಷನ್ ಮಾಡಿರುವುದನ್ನು ನೋಡಿದರೆ ಇದರಲ್ಲಿ ಒಬ್ಬರು ಹಿಂದೆ ಆರು ವರ್ಷದಿಂದ ಅಧ್ಯಕ್ಷರಾಗಿದ್ದರು. ಇನ್ನೊಬ್ಬರು ಸೂಪರ್‌ಸೀಡ್ ಆಗುವಾಗ ಅಧ್ಯಕ್ಷರಾಗಿದ್ದರು. ಇನ್ನೊಬ್ಬರು ರಘುನಾಥರಾವ್, ಶುಡುಗೌಡ, ಸುಬಾಸೇಟ್, ಹೆಚ್.ಎನ್. ಚಂದ್ರಶೇಖರಪ್ಪ ಹೊಸಹಳ್ಳಿ, ಚಿನ್ನಬಸಪ್ಪಗೌಡ ನಾರಾಯಣರಾವ್ ಹೊಸಬಾಳೆ ಇವರೆಲ್ಲಾ ಈ ಸೊಸೈಟಿಯನ್ನು ಸೂಪರ್‌ಸೀಡ್ ಮಾಡಿದಾಗ ಡೈರೆಕ್ಟರುಗಳಾಗಿದ್ದರು. ಕಾನೂನು ಪ್ರಕಾರ ಇವರನ್ನು ಅಡ್ವೈಸರಿ ಕಮಿಟಿಗೆ ಹಾಕುವುದಕ್ಕೆ ಆಗುವುದಿಲ್ಲ. ತಮಗೆ ಬೇರೆ ಕಡೆಯಿಂದ ಒತ್ತಾಯಬಂದಿದೆ, ನೀವು ಮಾಡುತ್ತಿರಲಿಲ್ಲ. ನನಗೆ ಗೊತ್ತಿದೆ, ನನ್ನ ದುರಾದೃಷ್ಟ ತಾವು ಈ ಒತ್ತಾಯಕ್ಕೆ ಮಣಿದೂ ಮಣಿದೂ ಮುಂದಕ್ಕೆ ಏನಾಗುತ್ತದೆ ಎಂದು ಗೊತ್ತಾಗುವುದಿಲ್ಲ. ಇನ್ನೂ ಕೆಲವರನ್ನು ಮಾಡಿರುತ್ತೀರಿ. They are not the members of that society.

ಅವರು ಹೆಸರು ಬೇಕಾದರೆ ಹೇಳುತ್ತೇನೆ. ಭೀಮನಹಳ್ಳಿ ಶಿವಪ್ಪ ಅಡ್ವೊಕೇಟ್ ಇವರು ಮೆಂಬರ್‌ಗಳಲ್ಲ. ಸ್ವಾಮಿ ಈ ಕಬ್ಬಿಣದ ಅಂಗಡಿಯಲ್ಲಿ ನೊಣಕ್ಕೆ ಏನು ಕೆಲಸ? ಅವರು ಅಡಿಕೆ ಬೆಳೆಯುವುದಿಲ್ಲ. ಅಡಿಕೆ ಹಾಕುವುದಿಲ್ಲ. ಮೆಂಬರ್ಸ್ ಅಲ್ಲ. ಅವರನ್ನು ಅಡ್ವೈಸರಿ ಕಮಿಟಿಗೆ ಹಾಕಿರುತ್ತೀರಿ. ಏತಕ್ಕೆ ಅವರನ್ನು ನಾಮಿನೇಷನ್ ಮಾಡಿರುತ್ತೀರಿ? ಅದು ಬಹಳ ದೊಡ್ಡ ಸೊಸೈಟಿ.

ಶ್ರೀ ಆರ್.ವಿ. ದೇಶಪಾಂಡೆ : ಏಕೆ ಮಾಡಿದರು ಎಂದರೆ ಅವರು ಬಂಗಾರಪ್ಪನವರ ಪಡ್ಡಕರು ಎಂದು ಅದಕ್ಕೆ ಮಾಡಿದ್ದಾರೆ.

ಶ್ರೀ ಆರ್.ಎಲ್. ಜಾಲಪ್ಪ : ಅದು ನನಗೆ ಗೊತ್ತಿಲ್ಲ.

ಶ್ರೀ ಆರ್.ವಿ. ದೇಶಪಾಂಡೆ : ಫ್ಯಾಕ್ಟ್ ಇದೆ.

ಶ್ರೀ ಆರ್.ಎಲ್. ಜಾಲಪ್ಪ : ಆಮೇಲೆ ಈ ಸಂಘಗಳ ಬೈಲಾಗೆ ವಿರುದ್ಧವಾಗಿ ಸಾಲ ಕೊಟ್ಟಿದ್ದಾರೆ. ಅದರಲ್ಲಿ ಎರಡು ಲೈನ್ ಇದೆ. ಈ ಫ್ಲೆಡ್ಜ್ ಲೋನ್ ಕೊಡಬೇಕಾದರೆ ಈ ವ್ಯಾಪ್ತಿಯ ಹೊರಗಡೆ ಇರುವವರಿಗೂ ಫ್ಲೆಡ್ಜ್ ಲೋನ್ ಕೊಡಬಹುದು ಎಂದು ಒಂದು ಲೈನ್ ಇದೆ ಅದನ್ನು ದುರುಪಯೋಗ ಮಾಡಿಕೊಂಡು ಈ ವ್ಯಾಪ್ತಿಯ ಒಳಗಡೆ ಬಾರದೆ ಇದ್ದರೂ ಲಕ್ಷಾಂತರ ರೂಪಾಯಿಗಳ ಸಾಲ ಕೊಟ್ಟಿದ್ದಾರೆ. ಒಂದೇ ಸಂಸಾರಕ್ಕೆ 40 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಅದಕ್ಕೆ ಬಡ್ಡಿ ಕ್ಯಾಲ್ಕುಲೇಟ್ ಮಾಡಿದರೆ 60 ಲಕ್ಷ ರೂಪಾಯಿಗಳಾಗುತ್ತದೆ. ನಾನು ಇಲ್ಲಿ ಯಾರನ್ನೂ ತೇಜೋವಧೆ ಮಾಡುತ್ತಿಲ್ಲ. ಅವರು ನಮ್ಮ ಸಂಬಂಧಿ. ನಿಮ್ಮ ಕ್ಯಾಬಿನೆಟ್ ಮಂತ್ರಿ. ನಾನು ಅವರ ಹೆಸರನ್ನು ಹೇಳುವುದಿಲ್ಲ. ನಾನು ಒಬ್ಬ ರೈತ. ರೈತ ಸಾಲ ಮಾಡದೇ ಬದುಕುವುದಕ್ಕಾಗುವುದಿಲ್ಲ. ನಾನು ಸಹ ಸಾಲ ಮಾಡಿದ್ದೇನೆ. ನಾನು ಸಹ ಡಿಫಾಲ್ಟರ್ ಆಗಿದ್ದೇನೆ. ನಾನು ಜಿಲ್ಲಾ ಬ್ಯಾಂಕ್ ಅಧ್ಯಕ್ಷನಾಗಿದ್ದಾಗ ರಿಜರ್ವ್ ಬ್ಯಾಂಕ್‌ನವರು ನನ್ನ ಮೇಲೆ ಸ್ಟ್ರಿಕ್ಚರ್ ಪಾಸ್ ಮಾಡಿದ್ದರು. ನಾನು ಡಿಫಾಲ್ಟ್ ಆಗಿದ್ದಾನೆ, ಬ್ಯಾಂಕ್ ಪ್ರೆಸಿಡೆಂಡ್ ಆಗಿದ್ದಾನೆ ಎಂದು ಸ್ಟ್ರಿಕ್ಚರ್ ಬರೆದಿದ್ದರು. ನಾನು 1983ರಲ್ಲಿ ಯಾವುದೋ ಒಂದು ಬ್ಯಾಂಕಿಗೆ ರೂಲ್ 64ರ ಪ್ರಕಾರ ಎನ್‌ಕ್ವೈರಿಗೆ ಆರ್ಡರ್ ಮಾಡಿದೆ ಆಗ ಆ ಕಡೆ ಕುಳಿತುಕೊಂಡಿದ್ದಂತಹ ನಮ್ಮ ಮಾನ್ಯ ಸದಸ್ಯರು ಸುಮಾರು ಎರಡು ದಿವಸಗಳ ಕಾಲ ತರಾಟೆಗೆ ತೆಗೆದುಕೊಂಡರು. ನೀವು ಡಿಫಾಲ್ಟರ್ ಆಗಿದ್ದೀರಿ. ನಿಮ್ಮಮೇಲೆ ರಿಜರ್ವ್‌ಬ್ಯಾಂಕ್‌ನವರು ಸ್ಟ್ರಿಕ್ಚರ್ ಮಾಡಿದ್ದಾರೆ ಎಂದು. ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ನಾನು ಇಲ್ಲಿ ಯಾರನ್ನೂ ತೇಜೋವಧೆ ಮಾಡುವುದಕ್ಕೆ ಹೊರಟಿಲ್ಲ. ಸಾಲ ಮಾಡಲೇಬೇಕಾಗುತ್ತದೆ. ಬೇರೆ ವಿಧಿಯೇ ಇಲ್ಲ. ಅದು ನಮ್ಮ ರೈತರ ಕರ್ಮ. ಎಷ್ಟೇ ಹಣವಂತನಾಗಿದ್ದರೂ ಕೂಡ ಸಾಲ ಮಾಡಬೇಕಾಗುತ್ತದೆ. ಆದರೆ ಸಾಲ ಮಾಡುವಾಗ ನಿಯಮಗಳಿಗೆ ಅನುಗುಣವಾಗಿ ಇರಬೇಕು ಮತ್ತು ತೆಗೆದುಕೊಂಡಂತಹ ಸಾಲ ವಾಪಸ್ ಕೊಡಬೇಕು.

ಇದನ್ನು ಕಲಿಯಬೇಕು. ಎಲ್ಲಿ ಅಧಿಕಾರದಲ್ಲಿ ಇರುತ್ತಾರೋ ಮತ್ತು ಇಂಪಾರ್ಟೆಂಟ್ ಪೀಪಲ್ಸ್ ಇರುತ್ತಾರೋ ವಿ.ಐ.ಪಿ.ಗಳು ಇರುತ್ತಾರೋ ಅವರು ಇದನ್ನು ಕಲಿಯಬೇಕಾಗುತ್ತದೆ. ಇಲ್ಲದಿದ್ದರೆ ಆ ಸಹಕಾರ ಸಂಘಗಳು ಉಳಿಯುವುದಿಲ್ಲ. ಒಂದು ಸಂಸಾರಕ್ಕೆ ಸುಮಾರು 50-60 ಲಕ್ಷ ರೂಪಾಯಿಗಳಿಗೆ ಕೊಟ್ಟಿರುವುದರಿಂದ ಆ ಹಣ ಬರಬೇಕಾಗಿದ್ದರೆ ಆ ಸಹಕಾರ ಸಂಘ ಹೇಗೆ ಉಳಿಯುತ್ತದೆ? ಒಂದೇ ಸಂಸಾರ ಅಲ್ಲ. ಇಂತಹ ನಾಲ್ಕಾರು ಸಂಸಾರಗಳಲ್ಲಿ ಸುಮಾರು 25 ಲಕ್ಷ 30 ಲಕ್ಷ ಕೊಟ್ಟು ಅವರಿಂದ ಸರಿಯಾಗಿ ಬಡ್ಡಿ ಕಲೆಕ್ಟ್ ಮಾಡಿಲ್ಲ. ಬಡ್ಡಿ ಸರಿಯಾಗಿ ಕ್ಯಾಲ್ಕುಲೇಟ್ ಮಾಡಿದರೆ ಒಂದು ಸಂಸಾರದಾಗ 60 ಲಕ್ಷ ರೂಪಾಯಿಗಳು ಈ ಸಹಕಾರ ಸಂಘಕ್ಕೆ ಬರಬೇಕಾಗಿದೆ. ಈ ಸಹಕಾರ ಸಂಘಗಳಿಗೆ ಆಧಾರ ಏನು? ಏನು ಆಧಾರ ತೆಗೆದುಕೊಂಡು ಕೊಟ್ಟಿದ್ದಾರೆ? ಇದೇನು ಮಾರವಾಡಿ ಅಂಗಡಿಯೇ? ಜಮೀನು ಆಧಾರ ಮಾಡಿಕೊಂಡು ಒಂದು 20 ಎಕರೆ 40 ಎಕರೆ ಜಮೀನು ತೆಗೆದುಕೊಂಡು ಸಾಲಕೊಟ್ಟರೆ ಆ ಜಮೀನು 60 ಲಕ್ಷ ರೂಪಾಯಿಗಳಾಗುತ್ತದೆಯೇ? ಇದು ಬಹಳ ಕಷ್ಟವಾಗುತ್ತದೆ. ಆದ್ದರಿಂದ ತಾವು ದಯಮಾಡಿ ಈ ಬರುವ ಸಾಲಗಳನ್ನು ಕಡ್ಡಾಯವಾಗಿ ವಸೂಲಿ ಮಾಡಬೇಕು. ನಮಗೆ ಈ ಅಡ್ವೈಸರಿ ಕಮಿಟಿಯಲ್ಲಿ ಹಾಕಿರುವುದರಿಂದ ನಾನು ಅಂದುಕೊಂಡಿದ್ದೇನೆ. ನೀವು ಸಪ್ರೆಸ್ ಮಾಡುತ್ತಿದ್ದೀರಿ ಎಂದು. ನಾನು ಒಂದು ಉದಾಹರಣೆ ಕೊಡುತ್ತೇನೆ.

ನಾನು ಮಂತ್ರಿಯಾಗಿದ್ದಾಗ ಮೈಸೂರು ಕನ್‌ಸ್ಯೂಮರ್ ಕೋ-ಆಪರೇಟಿವ್ ಸೊಸೈಟಿಯವರು ಒಂದು ಲಕ್ಷ ಮೂರು ಸಾವಿರ ಜಪಾನ್ ಜಿಪ್ಸ್‌ನ್ನು ಅಲ್ಲಿಗೆ ತೆಗೆದುಕೊಂಡು ಹೋದರು. ಅವರು ಮೈಸೂರಿಗೆ ತೆಗೆದುಕೊಂಡು ಹೋದ ಮುಕ್ಕಾಲು ಗಂಟೆಯಲ್ಲಿ ಎಲ್ಲಾ ಜಿಪ್ಸ್ ಮಾರಾಟ ಮಾಡಿದ್ದಾರೆ. ಬಿಲ್ ಹಾಕಿದ್ದಾರೆ. ಅದರಲ್ಲಿ ಅಡ್ರೆಸ್ ಇಲ್ಲ, ಏನೂ ಇಲ್ಲ. ಅವು ಇಂಪೋರ್ಟೆಡ್ ಗೂಡ್ಸ್. ಮಾರಾಟ ಮಾಡಬೇಕಾದರೆ ಯಾರಿಗೆ ಮಾರಾಟ ಮಾಡಿದ್ದು, ಅವರ ಪೂರ್ಣ ವಿಳಾಸ ಇರಬೇಕು. ಅದೇನೂ ಇಲ್ಲ. ಒಂದು ಸಣ್ಣ ಚೀಟಿಯಲ್ಲಿ ಬರೆದು ಮಾರಾಟ ಮಾಡಿದ್ದಾರೆ. ಇದು ಕೆಲವು ಲೋಕಲ್ ಪೇಪರ್‌ನವರು ಬರೆದರು. ನಾನು ತಕ್ಷಣ ಟೆಲಿಫೋನ್ ಮಾಡಿ ಏನು ಸಮಾಚಾರ ಎಂದು ಕೇಳಿ ಕಡೆಗೆ ಆ ಸಂಸ್ಥೆಯನ್ನು ಸೂಪರ್‌ಸೀಡ್ ಮಾಡಲು ಕ್ರಮ ತೆಗೆದುಕೊಂಡೆ. ಈ ಸಂಸ್ಥೆಯನ್ನು ಸೂಪರ್‌ಸೀಡ್ ಮಾಡಿದಾಗ ಅವರು ಅಪೀಲ್ ಹೋಗಲಿಲ್ಲ, ಒಂದೂವರೆ ವರ್ಷ ಆದಮೇಲೆ he was disqualified for three years from holding any office in the co-operative institutions ಅಪೀಲು ಹೋದರು. ಅಪೀಲು ಹೋಗಿ ಎರಡೂ ಎರಡೂವರೆ ವರ್ಷಗಳು ಆದಮೇಲೆ ಒಂದು ಜಡ್ಜ್‌ಮೆಂಟ್ ಬಂತು. ನಿಜವಾಗಿಯೂ ನಾವು ಆಶ್ಚರ್ಯಪಡಬೇಕೋ, ಅಳಬೇಕೋ ನಗಬೇಕೋ ಗೊತ್ತಿಲ್ಲ. ಯಾರನ್ನು ಸಸ್ಪೆಂಡ್ ಮಾಡಿದ್ದೆವು, ಅವರಿಗೆ ಆ ಜಡ್ಜ್‌ಮೆಂಟ್ ಪ್ರಕಾರ ಜಾಯಿಂಟ್ ರಿಜಿಸ್ಟ್ರಾರ್ ಅವರು ಎರಡೂವರೆ ಸಾವಿರ ರೂಪಾಯಿಗಳ ಪರಿಹಾರ ಕೊಡಬೇಕು ಮತ್ತು ಆಗ ಮಂತ್ರಿಗಳಾಗಿದ್ದವರು ಎರಡೂವರೆ ಸಾವಿರ ರೂಪಾಯಿಗಳ ಪರಿಹಾರ ಕೊಡಬೇಕೆಂದು ಮಾಡಿದರು. ಏಕೆಂದರೆ ಅವರಿಗೆ ಸಫರಿಂಗ್ ಮತ್ತು ಮೆಂಟಲ್ ಶಾಕ್ ಆಗಿದ್ದಕ್ಕೆ. ಇದು ಜಡ್ಜ್‌ಮೆಂಟ್ ಬಂದಿದ್ದು. ನಾನು ಕೋರ್ಟ್‌ಗಳನ್ನು ನಿಂದನೆ ಮಾಡುವುದಿಲ್ಲ. ಏಕೆಂದರೆ ಕೋರ್ಟಿಗೆ they were not properly apprised. ಕೋರ್ಟಿಗೆ ಹೋಗಿ ಅವರು ಸರಿಯಾಗಿ ಹೇಳಲಿಲ್ಲ. ನಾನು ಆಗಿನ ಸೆಕ್ರೆಟರಿಗೆ ಒಂದು ಕಾಗದ ಬರೆದೆ. ಏನು ಸ್ವಾಮಿ ಇದು ನಾನು ಎರಡೂವರೆ ಸಾವಿರ ರೂಪಾಯಿಗಳ ದಂಡ ಕೊಡಬೇಕು ಎಂದರೆ ದೇವರೇ ಗತಿ, ಆಮೇಲೆ ಮಾನ್ಯ ವೀರಪ್ಪ ಮೊಯಿಲಿಯವರು ಲಾ ಮಿನಿಸ್ಟರ್ ಆಗಿದ್ದರು. ಅವರಿಗೆ ಒಂದು ಪತ್ರ ಬರೆದೆ, ಅವರು ನನಗೆ ರಿಪ್ಲೈ ಸಹ ಮಾಡಿದರು. ಆದರೆ ಅಪೀಲ್‌ಗೆ ಯಾರು ಪ್ರಿಫರ್ ಮಾಡಿಲ್ಲ. ಅಧ್ಯಕ್ಷರೇ ಈಗ ನಾನು ಕೋರ್ಟಿಗೆ ಹಾಕಿದ್ದೇನೆ, ನನಗೆ ನೋಟೀಸ್ ಇಲ್ಲದೆ ಇದು ಮಾಡಿದ್ದೀರೆಂದು I have gone before the Court. This is the position of the Department. ನನಗೇನು ಒಂದು ಹೆದರಿಕೆ ಬಂತು ಅಂದ್ರೆ ಇದನ್ನು ನಿಮ್ಮ ಅಧಿಕಾರಿಗಳು ಮುಚ್ಚಿಹಾಕುತ್ತಾರೆ. ಅವರ್ಯಾರೂ ಜವಾಬ್ದಾರಿ ತೆಗೆದುಕೊಳ್ಳುವುದಿಲ್ಲ. ಮೊದಲು ಆಡಿಟರನ್ನು ಸಸ್ಪೆಂಡ್ ಮಾಡಬೇಕು. ಮೂರು ಸಾವಿರ ಮೂಟೆಗಳನ್ನು ಒಂದೇ ದಿವಸದಲ್ಲಿ ತೆಗೆದುಕೊಂಡು ಹೋಗುವುದಕ್ಕೆ ಆಗುವುದಿಲ್ಲ. ಕಡೆಪಕ್ಷ 15-20 ಲಾರಿಗಳಾದರೂ ಬೇಕು. ಲಾರಿಗಳ ವೇ ಬಿಲ್, ಎಲ್ಲಾ ಇರುತ್ತದೆ. ಅಲ್ಲಿ ಸ್ಟಾಕ್ ಇದ್ದರೆ ತಾನೆ. ಸ್ಟಾಕ್ ಇಲ್ಲದೆ ಇದು ಒಂದು ಎರಡು ಮೂರು ವರ್ಷಗಳ ಕಾಲ ಹಾಗೇ ನಡೆಸಿಕೊಂಡುಬಂದಿದೆ. ಫ್ಲೆಡ್ಜ್ ಲೋನ್‌ನಲ್ಲಿ ಕೊಟ್ಟಿದ್ದಾರೆ. ಫ್ಲೆಡ್ಜ್ ಲೋನಿನಲ್ಲಿ ಏನಿದೆ? ಫ್ಲೆಡ್ಜ್ ಲೋನ್ ಆದ ಡೇಟಿನಲ್ಲಿ ಏನು ಫ್ಲೆಡ್ಜ್ ಮಾಡಿದ್ದಾರೆ, ಅದರ ಕ್ವಾಂಟಿಟಿಯ ಮುಕ್ಕಾಲು ಭಾಗದಷ್ಟು ಫ್ಲೆಡ್ಜ್ ಲೋನ್ ಕೊಡಬಹುದು. ಏಕೆಂದರೆ ಇಲ್ಲಿ ಅದರ ನಾಲ್ಕರಷ್ಟು ಕೊಟ್ಟಿದ್ದಾರೆ. ಎರಡು ಮೂರು ಕೇಸ್ ಹೇಳಬೇಕಾಗುತ್ತದೆ. ಫ್ಲೆಡ್ಜ್ ಮಾಡಿಲ್ಲ. ಆದರೆ ಲೋನ್ ಕೊಟ್ಟಿದ್ದಾರೆ. ಇಲ್ಲಿ ನೋಡಿ ಕೆಲವು ಹೇಳುತ್ತಾರೆ, - ಚಂದ್ರಶೇಖರ್ ಬೀರೂರು, ದಾಸ್ತಾನು ಮಂಡಳಿಯಲ್ಲಿ ಇಲ್ಲ, ಅವನಿಗೆ 2,67,999 ರೂಪಾಯಿ ಸಾಲ ಕೊಟ್ಟಿದ್ದಾರೆ. ಆಮೇಲೆ ಎ.ಆರ್. ರಾಮಯ್ಯ, ಎ.ಆರ್. ಕಾಂತರಾಜು ಬೀರೂರು, ಎ.ಆರ್. ಲೋಕೇಶ್, ಇವರಿಗೆ ದಾಸ್ತಾನಿಲ್ಲ. 1,30,000 ಸಾಲ. ಹೀಗೆ ಇನ್ನೊಬ್ಬರಿಗೆ ದಾಸ್ತಾನಿಲ್ಲ. 1,72,000

ರೂಪಾಯಿ ಸಾಲ. ನಮಗೂ ಇದರಲ್ಲಿ ಸ್ವಲ್ಪ ಕೊಡಿ. ಈಗ ಎಲೆಕ್ಷನ್ ಬಂದಿದೆ. ನಾವೂ ತೆಗೆದುಕೊಳ್ಳುತ್ತೇವೆ. ಆಮೇಲೆ ಅಹಮದ್ ಶರೀಫ್, ಅವರ ಮಕ್ಕಳೇನೋ ಗೊತ್ತಿಲ್ಲ, ಮಹಮದ್ ಕಾಸೀಮ್, ಮಹಮದ್ ಶರೀಫ್.

Mr. Speaker: It is necessary to go into all those details?

ಶ್ರೀ ಆರ್.ಎಲ್. ಜಾಲಪ್ಪ : ಇಲ್ಲ ಸರ್, ಇವರಿಗೆ ಲಕ್ಷಾಂತರ ರೂಪಾಯಿ, ಮಾಲು ಇಲ್ಲದೆ ಕೊಟ್ಟಿದ್ದಾರೆ. ಇದರ ಬಗ್ಗೆ ನನ್ನ ಪ್ರಾರ್ಥನೆ ಇಷ್ಟೇನೇ, ದಯಮಾಡಿ ಈ ಆಡಿಟರ್‌ನ್ನು ಸಸ್ಪೆಂಡ್ ಮಾಡಿ ಒಳ್ಳೆ ಆಡಿಟರ್‌ನ್ನು ಹಾಕಿ ಮೊದಲಿನಿಂದಲೂ ಆಡಿಟ್ ಮಾಡಿಸಿ. ಈ ಆಡಿಟರ್ ಕ್ಯಾಲ್‌ಕ್ಯುಲೇಷನ್ ಮಾಡುವಾಗ ಖಾತೆ ನಂಬರ್ ಕೊಡುತ್ತಾನೆ, ಎಷ್ಟು ಬುದ್ಧಿವಂತ ನೋಡಿ. ಹೆಸರು ಹೇಳುವುದಿಲ್ಲ, ಖಾತೆ ಪಾನ್ ನಂಬರ್ ಎಂದು ಹೇಳುತ್ತಾನೆ. ಆಡಿಟ್ ರಿಪೋರ್ಟ್ ಕೊಟ್ಟಾಗ ಜನರಲ್‌ಬಾಡಿ ಮೆಂಬರ್ಸ್‌ಗೆ ಗೊತ್ತಾಗಬಾರದಾ? ಯಾರು ಇವರು, ಏನು ಎಂದು. ಏನು ಮಾಡುತ್ತಾರೆ? ಹುಡುಗಾಟ ಆಡುತ್ತಾರೆ? ನಮ್ಮ ಡೆಪ್ಯೂಟಿ ರಿಜಿಸ್ಟ್ರಾರ್ ಏನು ಮಾಡುತ್ತಾರೆ? ಜಾಯಿಂಟ್ ರಿಜಿಸ್ಟ್ರಾರ್‌ಗಳು ಏನು ಮಾಡುತ್ತಾರೆ? ದಯಮಾಡಿ ಇದರ ಕಡೆ ಗಮನ ಕೊಡಬೇಕು. ಇನ್ನೊಂದು ಕಡೆ ಹೇಳುತ್ತಾರೆ. ನಿಮ್ಮ ಆಡಿಟರ್, ನಾವು ಎ.ಪಿ.ಎಂ.ಸಿ.ಯಲ್ಲಿ ಒಂದು ಆಕ್ಟ್ ಮಾಡಿದ್ದೇವೆ, ಅದು ತಮಗೆ ಗೊತ್ತಿಲ್ಲ. ಮಾಲು ಸೇಲ್ ಮಾಡುವುದು ಬೇರೆ, ಈ ಮಾಲು ಮಾರಾಟ ಆಗದೇ ಇರುವಾಗ ಗೋಡೌನ್‌ನಲ್ಲಿ ಫ್ರೀ ಆಫ್ ಚಾರ್ಜ್ ಇಟ್ಟುಕೊಳ್ಳಬೇಕು. ಅದರಮೇಲೆ ಎ.ಪಿ.ಎಂ.ಸಿ.ಯವರು ಪ್ಲೆಡ್ಜ್ ಲೋನ್ ಕೊಟ್ಟಿದ್ದಾರೆ. ಅದರಲ್ಲಿ ಒಂದು ಕಾಮೆಂಟ್ರಿ ಮಾಡುತ್ತಾನೆ ಒಂದು ಕಡೆ. ಸಂಘದಲ್ಲಿ ಆಧಾರ ಸಾಲ ಪಡೆದ ದಾಸ್ತಾನಿಗೆ ಸಂಘದವರು ಜವಾಬ್ದಾರರೇ ಅಥವಾ ಮಾಲುಗಾರರು ಜವಾಬ್ದಾರರೇ ಎಂಬುದನ್ನು ನಿಗದಿಗೊಳಿಸಲು ಸಾಧ್ಯವಿಲ್ಲ. ಏನು ಸ್ವಾಮಿ ಇದರ ಅರ್ಥ? ಆ ಮಾಲು ಯಾರದು? ಪ್ಲೆಡ್ಜ್ ಲೋನ್ ಕೊಟ್ಟಮೇಲೆ it is the property of the Society. But he says he cannot fix the responsibility and he cannot say who is the owner of this pledged property.

ಇಷ್ಟೊಂದೆಲ್ಲಾ ಇದೆ. ಇಷ್ಟಾದರೂ ಕೂಡಾ ಆಡಿಟರ್‌ನ್ನು ಇಟ್ಟುಕೊಂಡಿದ್ದಾರೆ ಅದು ಬಹಳ ಅಪಾಯವಾಗುತ್ತದೆ. ಮೊದಲು ಅವನನ್ನು ಸಸ್ಪೆಂಡ್ ಮಾಡಿ ಅಲ್ಲಿಗೆ ಸ್ವಲ್ಪ ಉತ್ತಮ ಆಡಿಟರ್‌ನ್ನು ಹಾಕಿಸಿ ಅದನ್ನು ಮಾಡಿಸಿ. ನಾನು ಸ್ವಂತ ಕೆಲಸದ ಮೇಲೆ ಸಾಗರಕ್ಕೆ ಹೋಗಿದ್ದಾಗ ಅಲ್ಲಿ ಕೆಲವರೆಲ್ಲಾ ಹೇಳಿದರು, ಸ್ವಾಮಿ, ಅವರ ಹತ್ತಿರ ಹೊಡೆದಿರುವ ದುಡ್ಡು ಬೇಕಾದಷ್ಟು ಇದೆ, ಇವರನ್ನೆಲ್ಲಾ ಸರಿಮಾಡಿಕೊಂಡಿದ್ದಾರೆ ಏನಾಗುವುದಿಲ್ಲ ಈ ಸೊಸೈಟಿಯೊಳಗೆ ಅಂಥಾ ಹೇಳಿದರು. ಕೆ.ಹೆಚ್.ಪಾಟೀಲರು ಇದ್ದಾರೆಂದು ನಾನು ಹೇಳಿದೆ. ಕೆ.ಹೆಚ್. ಪಾಟೀಲರು ಒಬ್ಬರು ಏನು ಮಾಡುತ್ತಾರೆ? ಕೆಳಗಡೆ ಇರುವ ಹೆಗ್ಗಣಗಳು ಸರಿಹೋಗಬೇಕಲ್ಲಾ ಎಂದು ಹೇಳಿದರು. ಇದನ್ನು ತಮ್ಮ ಗಮನಕ್ಕೆ ತಂದಿದ್ದೇನೆ ಸ್ವಾಮಿ. ತಾವು ದಯಮಾಡಿ ಇದನ್ನು ನೋಡಿ, ನೀವು ನಮಗಿಂತ ಸೀನಿಯರ್ ಕೋ-ಆಪರೇಟರ್. ಇದರ ಕಡೆ ಗಮನಕೊಟ್ಟು ನೀವು ಇದನ್ನು ಸರಿಮಾಡುತ್ತೀರೆಂದುಕೊಂಡಿದ್ದೇನೆ. ಮತ್ತು ಸಾಧ್ಯವಾದಷ್ಟು ಬೇಗ ಈ ಅಡ್ವೈಸರಿ ಕಮಿಟಿಯನ್ನು ತೆಗೆಯಿರಿ. ಇದರಿಂದ ಏನೂ ಪ್ರಯೋಜನವಾಗುವುದಿಲ್ಲ. ಕಳ್ಳರನ್ನೇ ನೇಮಕಮಾಡಿ ಲೆಕ್ಕಾಚಾರ ಮಾಡಿ ಅಡ್ವೈಸ್ ಮಾಡಿ ಎಂದರೆ, ಆ ಸ್ಪೆಷಲ್ ಆಫೀಸರ್‌ಗೆ ಏನು ಅಡ್ವೈಸ್ ಮಾಡುತ್ತಾರೆ ಇವರು? ಇನ್ನಷ್ಟು ಹೊಡೆಯಿರಿ ಅಂತ ಅಡ್ವೈಸ್ ಮಾಡುತ್ತಾರೆ ಅಷ್ಟೇತಾನೆ. ಕಳ್ಳರನ್ನೇ ಹಾಕಿದ್ದೀರಿ. ಅಲ್ಲಿದ್ದವರನ್ನೇ ಹಾಕಿದ್ದೀರಿ ಸ್ವಾಮಿ. ದಯಮಾಡಿ ಇದನ್ನು ತೆಗೆಯಬೇಕೆಂದು ಹೇಳಿ ಅಲ್ಲಿ ಇನ್ನು ಮೂರು ತಿಂಗಳೊಳಗೆ ಎಲೆಕ್ಷನ್ ಮಾಡಿಸಿಬಿಡಿ ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ : ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಜಾಲಪ್ಪನವರು ವಿವರವಾಗಿ ಹೇಳಿದ್ದಾರೆ. ನಾನು ಎಲ್ಲಾ ವಿವರಗಳನ್ನು ಇಲ್ಲಿ ಪ್ರಸ್ತಾಪ

ಮಾಡುವುದಕ್ಕೆ ಇಷ್ಟಪಡುವುದಿಲ್ಲ. ನಾನು ಮೊದಲನೆಯದಾಗಿ ಮಾನ್ಯ ಸಹಕಾರ ಮಂತ್ರಿಗಳನ್ನು ಕೇಳುವುದೇನೆಂದರೆ ಏನು ಸಹಕಾರಿ ಕಾನೂನನ್ನು ಯಾವ ಆಧಾರದಮೇಲೆ ಮಾಡಿದ್ದೀರಿ, ಅದನ್ನು ಸ್ವಲ್ಪಮಟ್ಟಿಗಾದರೂ ಜಾರಿಗೆ ತರುವುದಕ್ಕೆ ತಮಗೆ ಮನಸ್ಸು ಇದೆಯೇ? ಈಗ ವಿಶೇಷಾಧಿಕಾರಿಯನ್ನು ನೇಮಕ ಮಾಡಿದ್ದೀರಿ. ನೇಮಕ ಮಾಡಿದಮೇಲೆ ಒಂದು ಸಲಹಾ ಸಮಿತಿಯನ್ನು ಮಾಡಿದ್ದೀರಿ. ನಾವು ಒಂದು ಸೊಸೈಟಿಯನ್ನು ರದ್ದು ಮಾಡಿದಮೇಲೆ, ರದ್ದುಮಾಡಿದ ನಂತರ ಚುನಾವಣೆ ಮಾಡುವ ಸಂದರ್ಭದಲ್ಲಿ ಆ ಚುನಾವಣೆಯಲ್ಲಿ ರದ್ದುಮಾಡಿದಂಥ ಸಮಯದಲ್ಲಿ ಯಾರು ಆಡಳಿತ ಮಂಡಳಿಯಲ್ಲಿ ಸದಸ್ಯರಿದ್ದರೋ, ಅವರು ಆ ಒಂದು ಚುನಾವಣೆಯಲ್ಲಿ ನಿಲ್ಲಲು ಅನರ್ಹರೆಂದು ನಾವು ಹೇಳುತ್ತೇವೆ. ಈ ಮಾತನ್ನು ಜ್ಞಾಪಕದಲ್ಲಿಟ್ಟುಕೊಂಡಾಗ, ತಾವು ಏನು ಇವತ್ತು ಸಲಹಾ ಸಮಿತಿ ಮಾಡಿದ್ದೀರಲ್ಲ, ಯಾರನ್ನು ಮಾಡಿದ್ದೀರಿ ಸ್ವಾಮಿ? ಏತಕ್ಕೋಸ್ಕರ ಮಾಡಿದ್ದೀರಿ? ನೀವು ನಿಜವಾಗಲೂ ಸದಾ ಸಹಕಾರ ಸಂಘದಲ್ಲಿ ಆಗಿರತಕ್ಕಂಥ ದುರುಪಯೋಗವನ್ನು ಮುಚ್ಚಿಹಾಕುವಂಥ ಪ್ರಯತ್ನ ಏನು ನಡೆಯುತ್ತಿದೆಯಲ್ಲಾ ಆ ಪ್ರಯತ್ನಕ್ಕೆ ತಾವು ಸಹಾಯ ಮಾಡುವುದಕ್ಕೋಸ್ಕರ ಏನಾದರೂ ಮಾಡಿದ್ದೀರಾ? ನಾನು ಹೇಳುತ್ತೇನೆ, ನೀವು ಏನಿವತ್ತು ಸಲಹಾ ಸಮಿತಿ ಮಾಡಿದ್ದೀರಿ, ನಿಮ್ಮ ಉದ್ದೇಶ, ಸಹಕಾರ ಸಂಘವನ್ನು ಸರಿಪಡಿಸಲಿಕ್ಕೇ ಅಲ್ಲ. ಆಗಿರುವಂಥ ಲೋಪದೋಷಗಳನ್ನು ತಿದ್ದಲಿಕ್ಕೆ ಅಲ್ಲ, ತಪ್ಪಿತಸ್ಥರಮೇಲೆ ಕ್ರಮ ತೆಗೆದುಕೊಳ್ಳಲಿಕ್ಕೆ ಅಲ್ಲ, ಅದಕ್ಕೆ ಬದಲಾಗಿ ಆ ಸಹಕಾರ ಸಂಘದಲ್ಲಿ ಏನು ದುರುಪಯೋಗವಾಗಿದೆ? ಅದನ್ನು ಮುಚ್ಚಿಹಾಕುವಂಥ ಪ್ರಯತ್ನ ಮಾಡುತ್ತಿದ್ದೀರಿ. ಹಾಗಾದರೆ ಅದಕ್ಕೆ ಒಂದು ಆಧಾರಬೇಕಲ್ಲಾ? ನಾನು ಹೇಳುತ್ತೇನೆ. ಮಾನ್ಯ ಜಾಲಪ್ಪನವರು ಹೇಳುವುದಕ್ಕಿಂತ ಹೆಚ್ಚಾಗಿ, ಯಾರು ಆ ಸಹಕಾರ ಸಂಘದಲ್ಲಿ ಮಾಲು ದಾಸ್ತಾನು ಇಲ್ಲದೆ ಮಾಲು ದಾಸ್ತಾನಿನ ಸಾಲ ತೆಗೆದುಕೊಂಡಿದ್ದಾರೆ, ಅಂಥವರನ್ನು ನೀವು ಸಲಹಾ ಸಮಿತಿಯ ಸದಸ್ಯರನ್ನಾಗಿ ಮಾಡಿದ್ದೀರಿ. ಇದರ ಅರ್ಥ ಏನು ಸ್ವಾಮಿ? ಸ್ವಾಮಿ ಮಾನ್ಯ ಅಧ್ಯಕ್ಷರೇ, 5 ಲಕ್ಷ ರೂಪಾಯಿ ಸಾಲ ತೆಗೆದುಕೊಳ್ಳುತ್ತಾರೆ. ಅಥವಾ 50ಸಾವಿರ ರೂಪಾಯಿ ಸಾಲ ತೆಗೆದುಕೊಳ್ಳಬಹುದು. ಆಗಿರುವಂತಹ ಲೋಪದೋಷಗಳನ್ನು ತಿದ್ದಲಿಕ್ಕೆ ಅಲ್ಲ; ತಪ್ಪಿತಸ್ಥರಮೇಲೆ ಕ್ರಮತೆಗೆದುಕೊಳ್ಳುವುದಕ್ಕೆ ಅಲ್ಲ. ಅದಕ್ಕೆ ಬದಲಾಗಿ ನೀವು ಸಹಕಾರ ಸಂಘಗಳಲ್ಲಿ ದುರುಪಯೋಗ ಆಗಿದೆ. ಅದನ್ನು ಮುಚ್ಚಿಹಾಕುವಂಥ ಪ್ರಯತ್ನವನ್ನು ತಾವು ಮಾಡುತ್ತಿದ್ದೀರಿ. ಹಾಗಾದರೆ ಇದಕ್ಕೆ ಒಂದು ಆಧಾರ ಬೇಕಲ್ಲ. ಮಾನ್ಯ ಜಾಲಪ್ಪನವರು ಹೇಳಿದ್ದಕ್ಕಿಂತ ಹೆಚ್ಚಾಗಿ ಯಾರು ಸಹಕಾರ ಸಂಘದಲ್ಲಿ ಮಾಲು ದಾಸ್ತಾನು ಇಲ್ಲದೆ, ಮಾಲು ದಾಸ್ತಾನಿನ ಸಾಲ ತೆಗೆದುಕೊಂಡಿದ್ದಾರೆ ಅಂಥವರನ್ನು ನೀವು ಸಲಹಾ ಸಮಿತಿಯ ಸದಸ್ಯರನ್ನಾಗಿ ಮಾಡಿದ್ದೀರಿ. ಇದರ ಅರ್ಥ ಏನು? ಐದು ಲಕ್ಷ ರೂಪಾಯಿ. ಸಾಲವನ್ನು ತೆಗೆದುಕೊಳ್ಳುತ್ತಾರೆ ಅಥವಾ 50 ಸಾವಿರ ರೂಪಾಯಿಗಳ ಸಾಲವನ್ನು ತೆಗೆದುಕೊಳ್ಳಬಹುದು. ತೆಗೆದುಕೊಂಡರೆ ಹಣವನ್ನು ವಾಪಸ್ಸು ಕೊಡುತ್ತಾರೆ. ಸಾಲದ ಹಣವನ್ನು ವಾಪಸ್ಸುಕೊಟ್ಟರೆ ಅದು ಬಡ್ಡಿಗೆ ಹೋಗುವುದಿಲ್ಲ. ಆ ದುಡ್ಡು ಅಸಲಿಗೆ ಹೋಗುತ್ತದೆ.

ಇದು ಯಾವ ಹೊಸ ಕಾನೂನು? ಇದು ಎಲ್ಲಿದೆ, ನನಗೆ ಅರ್ಥ ಆಗಿಲ್ಲ, ಇಂತಹ ಸಾಲಿಗರು ಇದ್ದರೆ ನಮಗೂ ಕೊಡಿ, ನಾವು ಸಹ ತೆಗೆದುಕೊಳ್ಳುತ್ತೇವೆ. ಲಕ್ಷಗಟ್ಟಲೆ ಸಾಲವನ್ನು ತೆಗೆದುಕೊಂಡು ಆ ಸಾಲವನ್ನು ಮರುಪಾವತಿ ಮಾಡುವಂತಹ ಸಂದರ್ಭದಲ್ಲಿ ನೀವು ಆ ಹಣವನ್ನು ಬಡ್ಡಿಗೆ ಜಮಾ ಮಾಡಿಕೊಳ್ಳುವುದಿಲ್ಲ. ಅದಕ್ಕೆ ಬದಲಾಗಿ ಅಸಲಿಗೆ ತೆಗೆದುಕೊಂಡು ಆ ಬಡ್ಡಿಯನ್ನು ಪೆನ್ಸಿಲ್‌ನಲ್ಲಿ ಗುರುತುಮಾಡುತ್ತಾರಂತೆ. ಈ ರೀತಿಯಾಗಿ ಹೊಸ ಕಾನೂನು ಇದೆಯೇ? ನಾನು ತಮ್ಮಿಂದ ಕೇಳಬಯಸುತ್ತೇನೆ. ಈ ರೀತಿ ಏನಾದರೂ ಸಹಾಯ ಮಾಡುವಂತಹ ಇಷ್ಟ ಇದ್ದರೆ ಒಂದು ಫಂಡ್‌ನಿಂದ ಎತ್ತಿಕೊಡಿ. ಮಾನ್ಯ ಮುಖ್ಯಮಂತ್ರಿಗಳ ನಿಧಿಯಿಂದ ಕೊಡಿ. ನಾನೇನು ಬೇಡ ಎಂದು ಹೇಳುವುದಿಲ್ಲ. ಇದನ್ನು ಯಾಕೆ ಮಾಡುತ್ತೀರಿ ಸ್ವಾಮಿ? 25 ರೂಪಾಯಿ ಅಥವಾ

30 ರೂಪಾಯಿ ಅಥವಾ 50 ರೂಪಾಯಿ ಅಲ್ಲ. ಯಾರು ಬಡವ ಇದ್ದಾನೆ, ನಮ್ಮಂಥವರು ಹೋದರೆ ಅಥವಾ ಬೇರೆಯವರು ಸಾಲ ತೆಗೆದುಕೊಂಡಿದ್ದರೆ ಮೊದಲು ಬಡ್ಡಿ ಹಾಕಿ ಉಳಿದರೆ ಅದನ್ನು ಅಸಲಿಗೆ ತೆಗೆದುಕೊಳ್ಳುತ್ತೇವೆಂದು ಹೇಳುತ್ತೀರಿ. ಈ ದೊಡ್ಡ ದೊಡ್ಡ ಮಂದಿ ಲಕ್ಷಗಟ್ಟಲೆ ಸಾಲ ತೆಗೆದುಕೊಂಡ ಜನ, ಅಲ್ಲಿ ವಾಪಸ್ ಕೊಡಲು ಹೋದರೆ ಮೊದಲು ಅಸಲಿಗೆ ತೆಗೆದುಕೊಂಡು ಬಡ್ಡಿಯನ್ನು ಹಾಗೇ ಇಟ್ಟಿದ್ದೀರಿ. ಹೀಗೆ ಇಟ್ಟಂತಹ ಬಡ್ಡಿ ಹಣ ಇವತ್ತಿನ ದಿವಸ ಲಕ್ಷಗಟ್ಟಲೆ ಆಗಿದೆ. ಒಂದು ಲಕ್ಷ ಎರಡು ಲಕ್ಷ ಅಲ್ಲ, ಹತ್ತಾರು ಲಕ್ಷ ರೂಪಾಯಿ ಆಗಿವೆ. ಈ ಬಡ್ಡಿ ಹಣ ಇವತ್ತಿನ ದಿವಸ ಸಹಕಾರ ಸಂಘಕ್ಕೆ ಬರಬೇಕಾಗಿದೆ. ಅದು ಮೊದಲನೇ ವಿಚಾರ. ಎರಡನೆಯ ವಿಚಾರ ಏನು ಅಂದರೆ ಆಡಿಟ್ ಮಾಡಿದ್ದಾರೆ. ನಾನು ತಮ್ಮನ್ನು ಕೇಳುವುದು ಇಷ್ಟೇನೇ? ತಾವು ಒಂದು ಸಾರಿ ಇದನ್ನು ಓದಿ. ತಮಗೆ ನಮ್ಮೆಲ್ಲರಿಗಿಂತಲೂ ಚೆನ್ನಾಗಿ ಅನುಭವ ಇದೆ. ವ್ಯವಸ್ಥಿತವಾಗಿ ಆಡಿಟ್‌ರವನ್ನು ಇವರು ಕೊಂಡುಕೊಂಡಿದ್ದಾರೇನೋ ಎನ್ನುವ ಸಂಶಯ ಬರಬೇಕು, ಹಾಗೆ ಸಂಶಯ ಬರುವಂತಹ ರೀತಿಯಲ್ಲಿ ಈ ಆಡಿಟ್ ವರದಿ ಇದೆ.

ಯಾರು ಕರ್ತವ್ಯ ಲೋಪಮಾಡಿದ್ದಾರೆ, ಯಾರು ಮಾಲು ದಾಸ್ತಾನು ಮಾಡಿದ್ದಾರೆ, ಯಾರು ಟ್ರೇಡ್ ಲೋನ್ ಕೊಡಬೇಕಾದರೆ ಯಾವ ಒಂದು ಕಾನೂನನ್ನು ಅನುಸರಿಸಬೇಕು ಅವೆಲ್ಲವನ್ನೂ ತದ್ವಿರುದ್ಧವಾಗಿ ಇವತ್ತಿನ ದಿವಸ ಅಲ್ಲಿರತಕ್ಕ ವೇಸ್ಟೆಡ್ ಇಂಟರೆಸ್ಟ್ ಏನ ಇದ್ದಾವೆ, ಇಂತಹ ಒಂದು ಪಟ್ಟಭದ್ರ ಹಿತಾಸಕ್ತಿಗಳಿಗೆ ಸಹಾಯ ಮಾಡುವಂತಹ ದಿಸೆಯಲ್ಲಿ ಈ ಆಡಿಟ್ ರಿಪೋರ್ಟ್ ಇದೆ. ಇದರಮೇಲೆ ಕ್ರಮ ತೆಗೆದುಕೊಳ್ಳುವುದಾದರೆ ಖಂಡಿತವಾಗಿ ಅವರೆಲ್ಲರೂ ಸಹ ನಿರ್ದೋಷಿಗಳು ಎಂದು ಕೋರ್ಟಿನಲ್ಲಿ ಹೇಳುವುದಕ್ಕೆ ಏನು ಬೇಕೋ ಆ ಒಂದು ತಳಹದಿಯನ್ನು ಅವರು ಈಗಾಗಲೇ ಕ್ರಿಯೇಟ್ ಮಾಡಿಕೊಂಡಿದ್ದಾರೆ. ಆದ್ದರಿಂದ ನಾನು ತಮ್ಮನ್ನು ಕೇಳುವುದು ಇಷ್ಟೇ. ಇವತ್ತಿನ ದಿವಸ ಏನು ಆಡಿಟ್ ಆಗಿದೆ, ಆ ಆಡಿಟ್ ಅನ್ನು ನೋಡಬೇಕು. ಅದನ್ನು ಪುನಃ ಆಡಿಟ್ ಮಾಡಲಿಕ್ಕೆ ನೀವು ಸರಿಯಾದಂತಹ ವ್ಯಕ್ತಿಗಳಿಗೆ ಇದನ್ನು ವಹಿಸಿಕೊಡಬೇಕು. ಅಲ್ಲಿ ಏನು ಲೋಪದೋಷಗಳನ್ನು ಹೇಳಿದ್ದಾರೆ, ಅದನ್ನು ಸರಿಪಡಿಸುವುದಕ್ಕೆ ಕಠಿಣವಾದ ಮತ್ತು ದೃಢವಾದ ಕ್ರಮಗಳನ್ನು ತಾವು ತೆಗೆದುಕೊಳ್ಳಬೇಕು. ಒಂದು ಪಕ್ಷ ತಾವು ನಿಸ್ಸಹಾಯಕರಾಗಿದ್ದರೆ ನಾನು ಖಂಡಿತವಾಗಿಯೂ ಸಹ ತಮ್ಮ ಬಗ್ಗೆ ವ್ಯಸನಪಡಬೇಕಾಗುತ್ತದೆ. ತೀವ್ರವಾದಂತಹ ಕಳವಳವನ್ನು ವ್ಯಕ್ತಮಾಡಬೇಕಾಗುತ್ತದೆ. ತಮ್ಮ ಕೈಯಿಂದ ಇದು ಆಗಬಾರದು. ಇವತ್ತಿನ ದಿವಸ ತಾವು ಏನು ಸಲಹಾ ಸಮಿತಿ ಮಾಡಿದ್ದೀರಿ, ಏನು ದುರುಪಯೋಗಕ್ಕೆ ಕಾರಣ ಆಗಿದೆ ಎಂಬ ಮಾತನ್ನು ಹೇಳಿದ್ದಾರೆ, ಯಾರು ಮಾಲು ದಾಸ್ತಾನು ಇಲ್ಲದೆ ಲಕ್ಷಗಟ್ಟಲೆ ಸಾಲವನ್ನು ಇವತ್ತು ಪಡೆದಿದ್ದಾರೆ. ಅವರ ಮೇಲೆ ನೀವು ಕ್ರಮವನ್ನು ತೆಗೆದುಕೊಳ್ಳಬೇಕು. ಅದರಲ್ಲಿ ಮುಖ್ಯವಾದಂತಹ ಪಾತ್ರ ಕಾರ್ಯದರ್ಶಿಯವರದ್ದು ಇದೆ. ಎಲ್ಲಕ್ಕಿಂತ ಹೆಚ್ಚಾಗಿ ಜಾಬ್ ಛಾರ್ಟ್ ಇದೆ. ಇವರು ಯಾವ ಮಟ್ಟಕ್ಕೆ ಹೋಗಿದ್ದಾರೆ ಎಂದರೆ ಜಾಬ್ ಛಾರ್ಟ್‌ನ್ನು ಸಿ.ಒ.ಡಿ. ಎನ್‌ಕ್ವೈರಿಗೆ ಹೋದ ಮೇಲೆ ಬದಲಾಯಿಸಿ ಹೊಸ ಜಾಬ್ ಛಾರ್ಟ್‌ನ್ನು ಅಲ್ಲಿ ಬರೆದಿದ್ದಾರೆ. ಅಲ್ಲಿ ಸಾಲ ಕೊಡಬೇಕಾದರೆ ರೆಸಲ್ಯೂಷನ್ ಪುಸ್ತಕದಲ್ಲಿ ಬರೆಯುತ್ತಾರೆ. ಇಂತಿಂಥವರಿಗೆ ಇಷ್ಟು ಸಾಲ ಎಂದು ಇವರು ಒಂದು ಪಟ್ಟಿ ಇಡುತ್ತಾರೆ. ಇವರ ಕಾಲದಲ್ಲಿ ಇಂತಹ ಪಟ್ಟಿ ಇರುತ್ತದೆ, ಲಗತ್ತಿಸಿರುವ ಪಟ್ಟಿಯಲ್ಲಿ ಕಂಡಂತಹ ಸದಸ್ಯರಿಗೆ ಸಾಲವನ್ನು ಕೊಡಬೇಕೆಂದು ತೀರ್ಮಾನಿಸಲಾಯಿತು ಎಂದು ಬರೆಯುತ್ತಾರೆ. ಆ ಪಟ್ಟಿ ಎಷ್ಟು ಬೇಕಾದರೂ ಉದ್ದ ಆಗಬಹುದು. ಎಷ್ಟು ಬೇಕಾದರೂ ದೊಡ್ಡದು ಆಗಬಹುದು. ಇಂತಹ ಒಂದು ಅವ್ಯವಸ್ಥೆ ಅಲ್ಲಿ ನಡೆದಿದೆ. ಇದರ ಬಗ್ಗೆ ತೀವ್ರವಾದಂತಹ ಕ್ರಮವನ್ನು ತೆಗೆದುಕೊಳ್ಳುತ್ತೀರಾ ಎಂದು ತಮ್ಮಿಂದ ತಿಳಿಯಬಯಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಅಧ್ಯಕ್ಷರೇ, ನನ್ನ ಸಹೋದ್ಯೋಗಿಗಳು ಸಾಕಷ್ಟು ಪ್ರಮಾಣದಲ್ಲಿ ಈಗಾಗಲೇ ಬೆಳಕನ್ನು ಚೆಲ್ಲಿದ್ದಾರೆ. ಸಹಕಾರಿ ರಂಗದಲ್ಲಿ ಇಂತಹ ಸಂಸ್ಥೆಗಳಲ್ಲಿ ರೈತರ ವಿಶ್ವಾಸವು ದಿನೇ ದಿನೇ ಕಡಿಮೆ ಆಗುತ್ತಿದೆ. ಮಾನ್ಯ ಸಚಿವರು ನಾವು ಹೇಳುವುದಕ್ಕಿಂತ ಮುಂದೆ ಹೇಳಿದರು. ಯಾವುದೇ ತರಹದ ಪ್ರೆಶರ್‌ಗೆ ನಾವು ಬಲಿ ಬೀಳುವುದಿಲ್ಲ ಎಂದು; ನಾವು ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಬಹಳ ಸಂತೋಷ. ಆದರೆ ಈ ಕೇಸ್ ಏನು ಇದೆ. It is a clear case of fraud, misappropriation, misuse of funds and misuse of power. ಆದ್ದರಿಂದ ನಾನು ವಿವರಕ್ಕೆ ಹೋಗುವುದಿಲ್ಲ. ಮೂರು ನಾಲ್ಕು ಪ್ರಶ್ನೆಗಳನ್ನು ಮಾತ್ರ ಕೇಳುತ್ತೇನೆ. ಈ ಅಡ್ವೈಸರಿ ಕಮಿಟಿಯನ್ನು ತಾವು ಏನು ಕಾನ್‌ಸ್ಟಿಟ್ಯೂಟ್ ಮಾಡಿದ್ದೀರಿ, 28.2.1991ಕ್ಕೆ. ಆ ಎಲ್ಲ ಸದಸ್ಯರು ಸಹ ಮುಂಚೆ ಆಡಳಿತ ಮಂಡಳಿಯಲ್ಲಿ ಇದ್ದವರೇ. ಆದರಿಂದ ಈ ಅಡ್ವೈಸರಿ ಕಮಿಟಿಯನ್ನು ತಾವು ರದ್ದುಮಾಡುತ್ತೀರೋ ಅಥವಾ ಅಲ್ಲವೋ ಇದು ಒಂದನೇ ಪ್ರಶ್ನೆ.

ಎರಡನೆಯದ್ದು ಆಡಿಟ್‌ರಿಪೋರ್ಟ್‌ನ ಬಗ್ಗೆ. ಅದರ ಬಗ್ಗೆ ಅವರು ಈಗಾಗಲೇ ಹೇಳಿರುವುದರಿಂದ ನಾನು ಪುನಃ ಅದರ ಬಗ್ಗೆ ಮಾತನಾಡುವುದಿಲ್ಲ. ಆಡಿಟ್ ರಿಪೋರ್ಟ್‌ನ್ನು ಬರೆಸಿದ್ದಾರೆ. ಅದರ ಬಗ್ಗೆ ಪುನರ್‌ಪರಿಶೀಲನೆ ಮಾಡಿ ಅದು ಸರಿಯಿಲ್ಲ ಅಂದರೆ ಅವರಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೀರಾ? ಮೂರನೆಯದು ಮಾನ್ಯ ಚಂದ್ರೇಗೌಡರು ಹೇಳಿದಹಾಗೆ ಎಲ್ಲಾ ವ್ಯವಹಾರಗಳು ಕಳೆದ ಆರೇಳು ವರ್ಷಗಳಿಂದ ನಡೆಯುತ್ತಾ ಬಂದಿದ್ದಾವೆ. ಆದರೆ ಇವೊತ್ತು ಕೇವಲ ಒಬ್ಬ ಕ್ಲರ್ಕ್‌ಮೇಲೆ ಇದರ ಜವಾಬ್ದಾರಿಯನ್ನು ಹಾಕುತ್ತಾ ಇದ್ದಾರೆ. ಇವೊತ್ತು ಆ ಕ್ಲರ್ಕ್‌ನ್ನು ಅರೆಸ್ಟ್ ಮಾಡಿಸಿ ಅವರಮೇಲೆ ಮಿಸ್ ಅಪ್ರೊಪ್ರಿಯೇಟ್ ಮಾಡಿದ್ದಾರೆಂದು ಕೇಸ್ ಹಾಕುತ್ತಾ ಇದ್ದಾರೆ. ತಪ್ಪುಮಾಡಿದವರು ಯಾರು? ಈ ರೀತಿಯಲ್ಲಿ ಮಾಡಿ ದೊಡ್ಡ ಜನರು ಪಾರಾಗುತ್ತಿದ್ದಾರೆಯಾದ ಕಾರಣ ಅದರ ಬಗ್ಗೆ ತಾವುಗಳು ಏನು ಕ್ರಮವನ್ನು ತೆಗೆದುಕೊಳ್ಳುತ್ತೀರಿ? ಇನ್ನೊಂದು ಎಲ್ಲಕ್ಕಿಂತಲೂ ಮುಖ್ಯವಾದುದು ಅಂದರೆ, ಈ ಸಹಕಾರಿ ಸಂಘದ ಸದಸ್ಯರೇನಿದ್ದಾರೆ, ಅವರ ವಿಶ್ವಾಸ ಈ ಬಗ್ಗೆ ಹೊರಟುಹೋಗಿದೆ. ಆ ಒಂದು ವಿಶ್ವಾಸವನ್ನು ಪುನರ್ ಪ್ರತಿಷ್ಟಾಪಿಸಲು ಸರಕಾರದವರು ಏನು ಕ್ರಮವನ್ನು ತೆಗೆದುಕೊಳ್ಳುತ್ತಾರೆ ಎಂಬುದನ್ನು ಹೇಳಬೇಕು. ಮತ್ತು ತಮ್ಮ ಒಬ್ಬ ಸಹೋದ್ಯೋಗಿಗಳು ಇವೊತ್ತು ಸರಕಾರದಲ್ಲಿ ಮಂತ್ರಿ ಸ್ಥಾನದಲ್ಲಿದ್ದಾರೆ. ಅವರು ಮತ್ತು ಅವರ ಕುಟುಂಬವರ್ಗದವರು ಈ ಸಹಕಾರಿ ಸಂಘಕ್ಕೆ ಸುಮಾರು 60 ಲಕ್ಷ ರೂಪಾಯಿಗಳಷ್ಟು ಬಾಕಿಯನ್ನು ಕೊಡಬೇಕಾಗಿದೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಸಚಿವರು ಪದೇಪದೇ ಹೇಳುತ್ತಿದ್ದಾರೆ, ಹಾಗಾದರೆ ಅವರು ಯಾರು ಎಂದು ಸಚಿವರು ಹೇಳಬೇಕು, ನನಗೆ ಗೊತ್ತಿಲ್ಲ ಮತ್ತು ಅದು ರಾಜ್ಯದ ಜನತೆಗೆ ಗೊತ್ತಾಗಬೇಕಾಗಿದೆಯಾದ ಕಾರಣ ದಯಮಾಡಿ ಅವರ ಹೆಸರನ್ನು ಹೇಳಬಹುದಲ್ಲ?

ಶ್ರೀ ಆರ್.ವಿ. ದೇಶಪಾಂಡೆ : ಅದು ಯಾರೆಂದು ಮಾನ್ಯ ಮಲ್ಲಿಕಾರ್ಜುನ ಪ್ರಸನ್ನರಿಗೆ ಗೊತ್ತಿದೆ.

ಶ್ರೀ ಸಿ. ಬೈರೇಗೌಡ : ಅವರಿಗೆ ಗೊತ್ತಿರಬಹುದು ನಮಗೆ ಗೊತ್ತಾಗಬೇಕಲ್ಲ?

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಸಚಿವರು ಮತ್ತು ಅವರ ಕುಟುಂಬದ ಸದಸ್ಯರು ಸಾಲ ತೆಗೆದುಕೊಂಡಿದ್ದಾರೆ. ನಾನು ಕೂಡ ಸಾಲ ತೆಗೆದುಕೊಂಡಿದ್ದೇನೆ, ಬೇರೆ ಯಾರಾದರೂ ತೆಗೆದುಕೊಂಡಿರಬಹುದು. ಡಿಫಾಲ್ಟರ್ ಇರಬಹುದು. ತೊಂದರೆಯ ಕಾರಣದಿಂದ ಯಾರೇ ಆಗಿರಲಿ ಡಿಫಾಲ್ಟರ್ ಆಗಿರಬಹುದು. ಅದರ ಬಗ್ಗೆ ನಾನು

ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಇಂಥ ಸ್ಥಾನದಲ್ಲಿದ್ದುಕೊಂಡು ನಾವು ಮಾಡಲಿಕ್ಕೆ ಶುರುಮಾಡಿದರೆ, ನಾವು ದಾಸ್ತಾನು ಇಲ್ಲದೆ ಹಣ ತೆಗೆದುಕೊಂಡಿದ್ದರೆ, ಯಾವ ಪ್ರಕಾರದಲ್ಲಿ ಈ ಸಹಕಾರ ಸಂಘಗಳ ಮೇಲೆ ಜನರು ವಿಶ್ವಾಸ ಇಡಬಹುದು? ಯಾವ ಪ್ರಕಾರ ಸಹಕಾರ ಸಂಘಗಳು ನಡೆಯಬಹುದು? ಆದುದರಿಂದ ನಾನು ಆ ವಿವರಗಳಿಗೆ ಹೋಗುವುದಿಲ್ಲ, ಪ್ರಶ್ನೆಯನ್ನು ತಮ್ಮ ಮುಂದಿಟ್ಟಿದ್ದೇನೆ. ತಾವುಗಳು ಸೂಕ್ತ ಕ್ರಮವನ್ನು ಈ ದಿಶೆಯಲ್ಲಿ ತೆಗೆದುಕೊಳ್ಳುತ್ತೀರಿ ಎಂಬ ಬಗ್ಗೆ ನಮಗೆ ವಿಶ್ವಾಸ ಇದೆ. ಆದುದರಿಂದ ಈ ಸಂಸ್ಥೆಯ ಮೇಲೆ ತಮಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯವಿದ್ದರೆ ತೆಗೆದುಕೊಳ್ಳಬೇಕು, ಒಂದು ವೇಳೆ ಹಾಗೆ ಕ್ರಮ ತೆಗೆದುಕೊಳ್ಳಲು ತೊಂದರೆ ಇದ್ದರೆ, ಸಾಧ್ಯವಾಗದಿದ್ದರೆ ತಾವುಗಳು ರಾಜೀನಾಮೆ ಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಹೆಚ್. ಪಾಟೀಲ್ (ಸಹಕಾರ ಸಚಿವರು) : ಮಾನ್ಯ ಸದಸ್ಯರುಗಳಾದ ಚಂದ್ರೇಗೌಡರು, ಏಕಾಂತಯ್ಯನವರು, ಜಾಲಪ್ಪನವರು ಮತ್ತು ದೇಶಪಾಂಡೆಯವರು ಬಹಳ ವಿವರವಾಗಿ ಸಹಕಾರ ಚಳುವಳಿಯಲ್ಲಿ ಜನತೆಯ ವಿಶ್ವಾಸವು ಹೇಗೆ ಹೋಗುತ್ತಿದೆ ಎಂಬುದನ್ನು ಹೇಳಿ ನನ್ನ ಗಮನವನ್ನು ಸೆಳೆಯುತ್ತಾ ಈ ಸಾಗರದ ಸೊಸೈಟಿಯಲ್ಲಿ ಏನು ಅಪ್ರಾಮಾಣಿಕ ವ್ಯವಹಾರವಾಗಿದೆ, ಆ ವ್ಯವಹಾರದ ಬಗ್ಗೆ ಸಹ ನನ್ನ ಗಮನವನ್ನು ಸೆಳೆದಿದ್ದಾರೆ. ಆದರೆ ಅವರು ವಿರೋಧಿ ಪಕ್ಷದ ಸ್ಥಾನದಲ್ಲಿರುವುದರಿಂದ ಅವರು ಆಡುವ ಭಾಷೆಯಾಗಲಿ, ನಡೆಯುವ ರೀತಿಯಾಗಲಿ, ನಿಜವಾಗಿಯೂ ಸರಿಯಾದುದು ಮತ್ತು ಸರಕಾರಕ್ಕೆ ಸಹಾಯಕವಾದುದು ಎಂದು ಮಾತ್ರ ಹೇಳಬಲ್ಲೆ. ಇದಕ್ಕಿಂತ ಹೆಚ್ಚಿಗೆ ಅವರನ್ನು ಟೀಕೆ ಮಾಡುವ ದಿಕ್ಕಿನಲ್ಲಿ ನಾನು ಹೋಗುವುದಿಲ್ಲ. ಸರಕಾರ ಮುಚ್ಚಹಾಕುವ ಸ್ಥಿತಿಯಲ್ಲಿದ್ದರೆ ಅಥವಾ ನನ್ನ ಅಧಿಕಾರಿಗಳು ಯಾವುದೇ ರೀತಿಯಿಂದ ತಮ್ಮ ನಿರ್ಲಕ್ಷತನವನ್ನು ತಾಳಿದ್ದರೆ ಸಿ.ಓ.ಡಿ.ಗೆ ಸೆಕ್ಷನ್ 409ರ ಕೆಳಗೆ ರಿಜಿಸ್ಟ್ರೇಶನ್ ಮಾಡುವುದಕ್ಕೆ ಸಾಧ್ಯವಿದೆ ಎಂದು ನೀವು ಹೇಳಿದ್ದೀರಿ ಮಾಲಿನಮೇಲೆ ಮಾಡಿಕೊಟ್ಟಿದ್ದಾರೆ ಎಂದು. ನನಗೆ ಇನ್ನೊಂದು ಪತ್ರ ಬಂದಿದೆ. ಮಾಲು ಇಲ್ಲದೇನೆ ಹಣ ಕೊಟ್ಟಿದ್ದಾರೆ ಎಂದು. ಅದಕ್ಕಾಗಿ ಸೆಕ್ಷನ್ 409 ಮತ್ತು ಸೆಕ್ಷನ್ 420ರ ಕೆಳಗೆ ಅದು ಸಿ.ಓ.ಡಿ. ಎನ್‌ಕ್ವೈರಿ ಆದನಂತರ ಗೊತ್ತಾಗುತ್ತದೆ. ನಿಮಗೆ ಯಾವ ರೀತಿಯಲ್ಲಿ ಸಂದೇಹ ಬೇಡ. ನಿಮಗೆ ಸಂದೇಹ ಏತಕ್ಕಾಗಿ ಬಂದಿದೆ ಅಂದರೆ ಇದರಲ್ಲಿ ಒಂದು ಅಡ್ವೈಸರಿ ಕಮಿಟಿಯನ್ನು ನೇಮಿಸಿದ್ದಾರೆ ಎಂಬ ಸಂದೇಹ ಬಂದಿದೆ. ಅಡ್ವೈಸರಿ ಕಮಿಟಿ ನೇಮಿಸಿದ್ದರ ಉದ್ದೇಶ ಏನು ಎನ್ನುವಂಥಾದ್ದರ ಮೇಲೆ ನಿಮ್ಮ ಎಲ್ಲಾ ಊಹಾಪೋಹಗಳು ನಡೆದಿದ್ದಾವೆ. ಇವೊತ್ತು ದೇಶಪಾಂಡೆಯವರು ಹೇಳಿದ ಕ್ಲರ್ಕ್‌ನ ಹೆಸರು ಪರಮೇಶ್ವರ ಭಟ್. ಅವರು ಗೋಡೌನ್ ಕೀಪರ್. ಅವರು ತಲೆತಪ್ಪಿಸಿಕೊಂಡು ಹೋಗಿದ್ದರು. ಅವರು ಸ್ವತಃ ತಲೆತಪ್ಪಿಸಿಕೊಂಡು ಹೋಗಿದ್ದಾರೋ ಅಥವಾ ಯಾರಾದರೂ ಬಚ್ಚಿಟ್ಟಿದ್ದಾರೋ ಎಂಬುದು ಗೊತ್ತಿಲ್ಲ. ಆಮೇಲೆ ಅವರು ಒಮ್ಮೆಗೇ ಪ್ರತ್ಯಕ್ಷವಾಗಿ ಶಿವಮೊಗ್ಗದಲ್ಲಿ ಸ್ವತಃ ಮ್ಯಾಜಿಸ್ಟ್ರೇಟ್ ಎದುರಿಗೆ ಹಾಜರುಮಾಡಿ ಬೇಲ್ ತೆಗೆದುಕೊಂಡಿದ್ದಾರೆ. ಶಿವಮೊಗ್ಗ ಮ್ಯಾಜಿಸ್ಟ್ರೇಟ್ ಬೆಲ್ ತೆಗೆದುಕೊಂಡಮೇಲೆ ಇದು ನನ್ನ ಹತ್ತಿರ ಬೇಡ, ಇದರ ಜ್ಯುರಿಸ್‌ಡಿಕ್ಷನ್ ಸಾಗರಕ್ಕೆ ಬರುತ್ತದೆ ಎಂದ ಮೇಲೆ ಸಾಗರಕ್ಕೆ ಹೋಗಿ ಅಲ್ಲಿ ಬೇಲ್ ತೆಗೆದುಕೊಂಡಿದ್ದಾರೆ. ಇದರ ಮೇಲೆ ಸಂದೇಹಾಸ್ಪದ ಇದೆಯೇ ಎಂಬುದನ್ನು ತಾವುಗಳೆಲ್ಲರೂ ಕೂಡಿ ಜಡ್ಜ್ ಮಾಡಿರಿ. ಆಮೇಲೆ ಅಲ್ಲಿ ಸೆಕ್ರೆಟರಿ ಇದ್ದವನು ಜನರ ವಿಶ್ವಾಸವನ್ನು ಗಳಿಸಿಕೊಂಡಿದ್ದಾನೆ ಎಂಬ ಬಗ್ಗೆ ನನಗೂ ಕೂಡ ಅನೇಕ ಜನರು ಹೇಳುತ್ತಿದ್ದಾರೆ.

ಆ ಸೆಕ್ರೆಟರಿಯನ್ನು ತೆಗೆದು ಸಸ್ಪೆಂಡ್ ಮಾಡಲಾಗಿದೆ. ಇದರಿಂದ ಡಿಪೋ ವಿಶ್ವಾಸ ಕಡಿಮೆಯಾಗೋಕೆ ಹತ್ತಿದೆ ಎಂದು ವರದಿ ಬಂದಿದೆ.

ಶ್ರೀ ಆರ್.ಎಲ್. ಜಾಲಪ್ಪ : ಅದೆಲ್ಲ ಸುಳ್ಳು ಸ್ವಾಮಿ. ನನಗೆ ಗೊತ್ತಿರೋದು ಹೇಳ್ತೇನೆ, ಸೆಕ್ರೆಟರೀನೇ ಇದಕ್ಕೆ ಬಹಳಷ್ಟು ಕಾರಣ ಅಂತ ಅಲ್ಲಿ ಹೇಳೋದು. ಯಾರು ಈಗ ಸೆಕ್ರೆಟರೀನ ರಕ್ಷಣೆ ಮಾಡ್ತಾರೆ ಅವರೆಲ್ಲ ಇದರಲ್ಲಿ ಸೇರಿಕೊಂಡಿದ್ದಾರೆ.

ಶ್ರೀ ಕೆ.ಹೆಚ್. ಪಾಟೀಲ್ : ಇರಬಹುದು, ನಾನು ಒಪ್ಪುತ್ತೇನೆ. ನೀವು ಹೇಳುವ ಮಾತಿನೊಳಗೆ ನನಗಿಂತ ಸಹಕಾರ ಚಳವಳಿಯಲ್ಲಿ ಹೆಚ್ಚಿನ ಆಸ್ಥೆ ನಿಮಗಿದೆ ಎಂದು ಒಪ್ಪುತ್ತೇನೆ. ಅದಕ್ಕಾಗಿ ನಾನು ನಿಮ್ಮ ಮಾತನ್ನು ತೆಗೆದುಹಾಕೋಲ್ಲ. ಸೆಕ್ರೆಟರಿ ಇದ್ದರೂ ಇರಬಹುದು ಇಲ್ಲದೆಯೂ ಇರಬಹುದು. ನಾನು ಆ ಸೆಕ್ರೆಟರೀನ ತಿರುಗ ನೇಮಿಸಲಿಕ್ಕೆ ಹೋಗಲಿಲ್ಲ, ಯಾವುದೂ ಮಾಡಲಿಲ್ಲ. ಇವರನ್ನು ಯಾಕೆ ನಂಬ್ತೀನಿ ಎಂದರೆ ಅಲ್ಲಿದ್ದ ಅನೇಕ ಮೂಟೆಗಳು ಇದ್ದುದು ಇಲ್ಲ ಅಥವಾ ಇಲ್ಲದೇ ಇದ್ದುದು ಸಾಲ ಕೊಟ್ಟಿದ್ದಾರೆ. ಕೆಲವರಿಗೆ ಆಸ್ತಿ ಇಲ್ಲ, ಸಹಕಾರ ಸಂಘ ಉಳಿಸಲಿಕ್ಕೆ ಕೆಲವರನ್ನು ಇಡಬೇಕು ಅಂತ. ಅದು ಕಮಿಟಿ ಅಲ್ಲ. ವಿಕಾಂತಯ್ಯನವರು ಹೇಳಿದಂತೆ, ಕಮಿಟಿ ನೇಮಿಸಬಾರದೆಂದು ಕಾನೂನು ಇದೆ, ಅಡ್ವೈಸರಿ ಕಮಿಟಿ ಅಂತ, ಅದಕ್ಕೆ ಕಾನೂನು ಇಲ್ಲ, ರೂಢಿಯೂ ಇಲ್ಲ. ಅವರಿಗೆ ಅಧಿಕಾರಾನೂ ಇಲ್ಲ. ಅದರ ಬಗ್ಗೆ ಬಹಳಷ್ಟು ತಾವು ಚರ್ಚೆ ಮಾಡಿದಿರಿ. ಇನ್ನು ಅಡಿಟರ್ ವಿಚಾರ ಹೇಳಿದಿರಿ. ನನಗೂ ಸಂದೇಹ ಬಂದಿದೆ ಅವರ ಬಗ್ಗೆ. ನಾನು ಪೊಲೀಸ್ ಅಧಿಕಾರಿಗಳಿಗೂ ಸಹ ಈ ಅಡಿಟರ್‌ಮೇಲೆ ಯೋಗ್ಯ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಲು ಮಾಡಿದ್ದೇವೆ. ಈಗ ಹೊಸ ಕಾನೂನಿನಲ್ಲಿ ಶಿಕ್ಷೆ ಮಾಡಬೇಕೆಂದಾಗ ಮುಚ್ಚಿಹಾಕುವಂಥ ಪ್ರಯತ್ನ ನಡೆದರೆ ಶಿಕ್ಷೆ ಮಾಡಬೇಕಂತ ಮಾಡಿದ್ದೇನೆ. ಈಗ ನಾನು ನೀವೂ ಕೂಡಿ ಮಾಡಲು ಏನು ಮಾಡೋದು ಎಂದರೆ ಶಿಕ್ಷೆ ಮಾಡಿ ಜೈಲಿಗೆ ಹಾಕೋದನ್ನು ಆಮೇಲೆ ನೋಡೋಣ, ಮೊದಲು ಆ ಸೊಸೈಟಿ ಉಳಿಸಬೇಕು. ಚಂದ್ರೇಗೌಡರು ಹೇಳಿದಂತೆ. ಸೊಸೈಟಿ ಮೆಂಬರಲ್ಲಿ ನಾವು ವಿಶ್ವಾಸವನ್ನು ಉಂಟುಮಾಡಬೇಕು. ಅದಕ್ಕೆ ಏನೇನು ಬೇಕೋ ಅದೆಲ್ಲ ಕಾರ್ಯಕ್ರಮಗಳನ್ನು ತ್ವರಿತವಾಗಿ ಮಾಡ್ತೀನಿ, ತಡಮಾಡುವುದಿಲ್ಲ. ಈಗ ಎನ್‌ಕ್ವೆಯರಿ ಇಷ್ಟು ದಿವಸ ತಡವಾಗಿದೆ ಅಂತ ನನ್ನ ಅಭಿಪ್ರಾಯವಿದೆ. ಸೆಕ್ಷನ್ 64ರ ಪ್ರಕಾರ ಎನ್‌ಕ್ವೆಯರಿ ಆಗಲಿ ಅಥವಾ ಸಿ.ಓ.ಡಿ. ಎನ್‌ಕ್ವೆಯರಿಯಾಗಲಿ ಅಥವಾ ನೀವು ಸಜೆಸ್ಟ್‌ಮಾಡುವ ಯಾವುದೇ ಎನ್‌ಕ್ವೆಯರಿಗೂ ನಾನು ತಯಾರಾಗಿದ್ದೇನೆ. ಅದಕ್ಕೂ ಯಾವ ತರಹದ ಅಭ್ಯಂತರವೂ ಇಲ್ಲ.

ಶ್ರೀ ಗುರುಪಾದಪ್ಪ (ನಾಗಮಾರಪಲ್ಲಿ): ಅಡ್ವೈಸರಿ ಕಮಿಟಿ ಮೊದಲು ತೆಗೆಯಬೇಕು.

ಶ್ರೀ ಕೆ.ಹೆಚ್. ಪಾಟೀಲ್ : ಸ್ಪೆಷಲ್ ಆಫೀಸರ್ ನೇತೃತ್ವದಲ್ಲಿ ಒಂದು ವರ್ಷದಲ್ಲಿ ಚುನಾವಣೆ ಆಗಬೇಕಾಗುತ್ತದೆ. ಈಗಾಗಲೇ ನಾಲ್ಕು ತಿಂಗಳಾಗಿಹೋಗಿವೆ. 8 ತಿಂಗಳಲ್ಲಿ ಚುನಾವಣೆ ಆಗಬೇಕು ಅದಕ್ಕೆ ಪೂರ್ವದಲ್ಲಿ ಸ್ವಲ್ಪ ಸೆಟ್‌ರೈಟ್ ಮಾಡಿ ಮಾಡೋಣ, ಇಲ್ಲವೇ ಹೋದರೆ ಮತ್ತೆ ಯಾರು ಬರ್ತಾರೆ, ಇವರೇ ಬರ್ತಾರೋ, ಅವರೂ ಬರ್ತಾರೋ ಗೊತ್ತಿಲ್ಲ. ಅದಕ್ಕೆ ಒಂದು ವರ್ಷದೊಳಗೆ ಚುನಾವಣೆ ಮಾಡಲಿಕ್ಕೆ ನಾನು ಆಸ್ತೆ ವಹಿಸ್ತೀನಿ ಮತ್ತು ಕೆಲಸ ಮಾಡುವುದಕ್ಕೆ ಪ್ರಯತ್ನ ಮಾಡ್ತೀನಿ. ಮತ್ತು ಅಡಿಟರನ್ನು ಸಸ್ಪೆಂಡ್ ಮಾಡುವ ಬಗ್ಗೆ ಹೇಳಿದಿರಿ. ಅದರ ಬಗ್ಗೆ ಏನಾದರೂ ಎವಿಡೆನ್ಸ್ ದೊರಕಿದರೆ ನಿಜವಾಗಲೂ ಅವನನ್ನು ಸಸ್ಪೆಂಡ್ ಮಾಡ್ತೀನಿ.

3) ಹಿರಿಯೂರು ತಾಲ್ಲೂಕಿನಲ್ಲಿರುವ ಸಕ್ಕರೆ ಕಾರ್ಖಾನೆಯನ್ನು ಪುನಶ್ಚೇತನಗೊಳಿಸದಿರುವುದರಿಂದ ಈ ಕಾರ್ಖಾನೆಯನ್ನು ಖಾಸಗಿಯವರಿಗೆ ವಹಿಸಿಕೊಡುವುದು.

ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಅಧ್ಯಕ್ಷರೇ, ಹಿರಿಯೂರು ತಾಲ್ಲೂಕಿನಲ್ಲಿ ಸಕ್ಕರೆ ಕಾರ್ಖಾನೆಯನ್ನು ಪುನಶ್ಚೇತನಗೊಳಿಸದಿರುವುದರಿಂದ ಈ ಕಾರ್ಖಾನೆಯನ್ನು ಖಾಸಗಿಯವರಿಗೆ ವಹಿಸಿಕೊಡುವ ಬಗ್ಗೆ ಸಹಕಾರ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಕೆ.ಹೆಚ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಹಿರಿಯೂರು ತಾಲ್ಲೂಕಿನಲ್ಲಿರುವ ವಾಣಿ ವಿಲಾಸ ಸಹಕಾರಿ ಸಕ್ಕರೆ ಕಾರ್ಖಾನೆಯು 1984-85ನೇ ಸಾಲಿನಿಂದ ಕಬ್ಬು ಅರೆಯುವಿಕೆಯನ್ನು ಸಂಪೂರ್ಣವಾಗಿ ನಿಲ್ಲಿಸಿದೆ. ಇದಕ್ಕೆ ಮುಖ್ಯ ಕಾರಣ ಇದೆ.